
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 31 ಆಗಸ್ಟ್ 1, 2004 ಬೆಲೆ ರೂ. 2.00



ಜನಾದೇಶ ಕಡೆಗಣಿಸಿದ ಬಜೆಟ್



ಬಟ್ಟೆ ಬಿಚ್ಚಿದರೂ ಸುಮ್ಮನಿದ್ದವರು





ಈಶಾನ್ಯ ಭಾರತದಲ್ಲಿ ಪ್ರವಾಹ

ನರಗುಂದ ರೈತ ಬಂಡಾಯದ ಸ್ಮರಣೆ

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ವೈದ್ಯಕೀಯ ಕ್ಷೇತ್ರದ ವಾಣಿಜ್ಯೀಕರಣ

"ವೈದ್ಯಕೀಯ ಕ್ಷೇತ್ರದಲ್ಲಿ ತೀವ್ರ ಬದಲಾವಣೆಯಾಗಿದೆ. ಅದೊಂದು ಬಿಸಿನೆಸ್ ಆಗಿದೆ' ಎಂದು ಬಹಳ ಜನರು ಗುರುತಿಸುತ್ತಾರೆ. ಕೆಲವೇ ವರ್ಷಗಳ ಹಿಂದೆ ರೋಗಿ ವೈದ್ಯರ ಹತ್ತಿರ ಹೋದರೆ, ರೋಗದ ಇತಿಹಾಸ ಕೇಳಿ, ಪರೀಕ್ಷೆಗಳನ್ನು ಮಾಡಿ ಚಿಕಿತ್ಸೆಗಳನ್ನು ಕೊಡುವ ಅಥವಾ ಬರೆದುಕೊಡುವ ಪದ್ಧತಿ ಇತ್ತು. ವೈದ್ಯರು ಔಷಧಿ ಕೊಟ್ಟು ಗುಣ ಪಡಿಸುವ ಪದ್ಧತಿಯನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. 'ನಮ್ಮ ಡಾಕ್ಟ್ರು ಒಮ್ಮೆ ಔಷಧಿ ಬರೆದುಕೊಟ್ಟರೆ, ಎಲ್ಲವೂ ಕೂಡಲೇ ಗುಣಹೊಂದುತ್ತದೆ' ಎಂ ನಂಬಿಕೆ ಜನರಲ್ಲಿ ಬಂದಿತ್ತು. 'ಆದರೆ ಈ ದಿನಗಳಲ್ಲಿ ವೈದ್ಯಕೀಯ ವೃತ್ತಿಯೇ ಬೇರೆಯಾಗಿದೆ' ಎಂದು ಹೇಳುತ್ತಾರೆ ಬಿಹೆಚ್ಇಎಲ್‌ನಲ್ಲಿ ಎಂಜಿನಿಯರ್ ಆಗಿದ್ದ ಚಂದ್ರಶೇಖರನ್. ಏನು ಬದಲಾವಣೆಯಾಗಿದೆ ಎಂದು ಕೇಳಿದ್ದಕ್ಕೆ, ಅವರು ಈ ವಿವರಣೆ ಕೊಟ್ಟರು

1. ವೈದ್ಯರು ವಿಪರೀತ ಔಷಧಿಗಳನ್ನು ಬರೆದುಕೊಡುತ್ತಾರೆ. ಬಹಳ ದಿನಗಳವರೆಗೆ ಔಷಧಿ ಉಪಯೋಗಿಸಲು ಹೇಳುತ್ತಾರೆ. ಉದಾ: ನರ ರೋಗ ತಜ್ಞ ತಲೆಸುತ್ತು ಎಂದದಕ್ಕೆ ಸ್ಟೂಜರಾನ್ ಎಂಬ ಮಾತ್ರೆಯನ್ನು ಮೂರು ತಿಂಗಳವರೆಗೆ ಉಪಯೋಗಿಸಲು ಹೇಳಿದ್ದರಂತೆ. ರೋಗಿ ನಂತರ ನಿಮ್ಹಾನ್ಸ್‌ನಲ್ಲಿ ಹೋಗಿ ಚಿಕಿತ್ಸೆ ಪಡೆದಾಗ ಸ್ಟೂಜರಾನ್ ಮೂರು ತಿಂಗಳವರೆಗೆ ಉಪಯೋಗಿಸುವ ಅಗತ್ಯವಿಲ್ಲವೆಂದು ಹೇಳಿ ಕೇವಲ ಕೆಲವು ವ್ಯಾಯಾಮಗಳನ್ನು ಹೇಳಿ ಕಳುಹಿಸಿದರಂತೆ.

2. ಅನಗತ್ಯ ಔಷಧಿಗಳನ್ನು ಬರೆದು ಕೊಡುತ್ತಾರೆ. ರೋಗಿ ತಲೆ ನೋವು ಎಂದು ಹೋದಾಗ ನರರೋಗ ತಜ್ಞರು ಬರೆದುಕೊಟ್ಟ ಒಟ್ಟು ಮಾತ್ರೆಗಳು ಎಂಟು. ಅವುಗಳಲ್ಲಿ ಏಳು ಔಷದಿಗಳು ಅನಗತ್ಯ ಎಂದು ಗೊತ್ತಾದವು. ಇಷ್ಟರ ಮೇಲೂ ರೋಗಿಗೆ 'ನಿಮಗೇನು ತೊಂದರೆ ಆಗಿಲ್ಲ. ಹೋಗ್ರಿ' ಎಂದು ನ್ಯೂರಾಲಜಿಸ್ಟ್ ಕಂಟ್ರೀ ಭಾಷೆಯಲ್ಲಿ ಹೇಳಿ ಕಳುಹಿಸಿದರಂತೆ. 'ಭೀಕರ ಕಾಯಿಲೆಯಾಗಿದ್ದರೆ ಮಾತ್ರ ಸ್ಪೆಶಲಿಸ್ಟ್ ವೈದ್ಯರು ಆಸಕ್ತಿ ವಹಿಸಿ ನೋಡುತ್ತಾರೆ'.

3. ವೈದ್ಯರು ಅನಗತ್ಯ ಪರೀಕ್ಷೆಗಳನ್ನು ಮಾಡಿಸುತ್ತಾರೆ. ಮಹಿಳೆ ತನಗೆ ಸುಸ್ತು ಆಗಿದೆಯೆಂದು ಹೇಳಿ ವೈದ್ಯರ ಹತ್ತಿರ ಪರೀಕ್ಷೆ ಮಾಡಿಸಲು ಹೋದಾಗ, ಸುಸ್ತು ಆಗಲು ಕಾರಣವೇನು ಎಂದು ಕಂಡು ಹಿಡಿಯಲು ಕೆಲವು ಪರೀಕ್ಷೆಗಳು (ರಕ್ತ ಪರೀಕ್ಷೆ, ಹೊಟ್ಟೆ ಸ್ಕ್ಯಾನಂಗ್, ಎದೆಯ ಎಕ್ಸರೇ) ಅಗತ್ಯ ಎಂದು ವೈದ್ಯರು ಹೇಳಿದ್ದರಂತೆ. ಆದರೆ ಈ ಎಲ್ಲಾ ಪರೀಕ್ಷೆಗಳ ವರದಿಗಳನ್ನು ರೋಗಿ ತೋರಿಸಿದಾಗ (ಎರಡು ದಿನಗಳ ನಂತರ) ಅವುಗಳನ್ನು ಇನ್ನೊಮ್ಮೆ ಮಾಡಿಸಲೇಬೇಕೆಂದು ಹೇಳಿದ್ದರಂತೆ. ಆ ವರದಿಯನ್ನು ರೋಗಿ ತೆಗೆದುಕೊಂಡು ಹೋದರೂ ನೀವು ನಾನು ಹೇಳಿದಲ್ಲಿ ಯಾಕೆ ಮಾಡಿಸಿಲ್ಲ, ನಾನು ಹೇಳಿದಲ್ಲಿ ಇನ್ನೊಮ್ಮೆ ಮಾಡಿಸಿ ಎಂದು ಹೇಳಿದ್ದರಂತೆ. ಆದರೆ ರೋಗಿ ಬೇಸರಗೊಂಡು, ವೈದ್ಯರನ್ನೇ ಬದಲಾಯಿಸಿದರಂತೆ.

4. ಅನಗತ್ಯವಾಗಿ ನರ್ಸಿಂಗ್ ಹೋಂಗೆ ಅಡ್ಮಿಟ್ ಮಾಡುತ್ತಾರೆ. 'ನಾನೊಮ್ಮೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದೆ. ಶಸ್ತ್ರ ಚಿಕಿತ್ಸೆ ಅಗತ್ಯವೆಂದು ಹೇಳಿದ್ದರು. ಆದರೆ ಅಲ್ಲಿಯ ಸರ್ಜನ್, ಈಗ ಆಪರೇಷನ್ ಮಾಡಲು ನನಗೆ ಸಾಧ್ಯ ವಿಲ್ಲ. ಎಂದು, ಅವರ ಏಜೆಂಟ್ ಅವರಿಂದಲೇನರ್ಸಿಂಗ್ ಹೋಂನಲ್ಲಿ ಆಪರೇಷನ್ ಮಾಡಿಕೊಟ್ಟಿದ್ದ.

5. ಪ್ರತಿಯೊಬ್ಬ ರೋಗಿಗೆ ಅವನಿಗೆ ಆದ ತೊಂದರೆ ಏನು, ಕೊಟ್ಟ ಚಿಕಿತ್ಸೆ ಏನು, ಎಷ್ಟು ದಿನಗಳಲ್ಲಿ ಗುಣ ಹೊಂದುತ್ತದೆ, ಗುಣ ಹೊಂದದಿದ್ದರೆ ಏನು ಮಾಡಬೇಕು ಎಂದು ಹೇಳಬೇಕು. ವೈದ್ಯರು ರೋಗಿಗೆ ಏನಾಗಿದಯೆಂದು ಕೇಳಿದರೂ ಹೇಳುವುದೇ ಇಲ್ಲ. ಕೇಳಿದರೂ ನಿಮಗೇನು ಗೊತ್ತಾಗುತ್ತದೆ ಎಂದು ಕೇಳುತ್ತಾರೆ. ಏನಾಗಿದೆಯೆಂದು ಕೇಳಿದರೆ ಕೋಪ ಮಾಡಿಕೊಳ್ಳುತ್ತಾರೆ.

ವೈದ್ಯಕೀಯ ವೃತ್ತಿಯಲ್ಲಿ ಅಸಮಂಜಸತೆ ಹಾಗೂ ಲಾಭಕೋರ ನೀತಿ ಎಲ್ಲರಿಗೂ ಗೊತ್ತಾಗದೇ ಇದ್ದರೂ, ಜನರು ವೈದ್ಯಕೀಯ ವೃತ್ತಿಯ ಮೇಲೆ ಇಟ್ಟಿರುವ ನಂಬಿಕೆಯಿಂದ ಇಂತಹ ಅವ್ಯಹಾರಗಳು ಮುಚ್ಚಿಹೋಗುತ್ತದೆ. ಇಂದು ದೊರಕುವ ವಿಶೇಷ ಪರೀಕ್ಷಾ ವಿಧಾನಗಳು, ಜನರಿಗೆ ಏಕೆ ವೈದ್ಯರಿಗೂ ಭ್ರಮೆ ಹುಟ್ಟಿಸಿವೆ. ಆದ್ದರಿಂದ ಈ ಎಲ್ಲಾ ವಿಧಾನಗಳೂ (ಎಕ್ಸರೇ, ಸ್ಕ್ಯಾನಿಂಗ್ ಇತ್ಯಾದಿ) ಹೆಚ್ಚು ಹೆಚ್ಚು ಉಪಯೋಗವಾಗುತ್ತಿದೆ. ಇಂದಿಗೂ ರೋಗಗಳು ಹಿಂದಿನಂತೆಯೇ ಸೋಂಕಿನಿಂದ, ಪೌಷ್ಟಿಕ ಆಹಾರದ ಕೊರತೆ, ಮಾನಸಿಕ ಒತ್ತಡದಿಂದ ಉಂಟಾಗುತ್ತಿದ್ದರೂ, ಪರೀಕ್ಷಾ ವಿಧಾನಗಳು ಬದಲಾಗಿವೆ. ಇದಕ್ಕೆ ಕಾರಣ ವ್ಯಾಪಾರೀಕರಣ.

ವ್ಯಾಪಾರೀಕರಣವನ್ನು ಕೆಲವರು ಗುರುತಿಸಿದ್ದರೂ ಹೆಚ್ಚಿನ ಜನರು ಇದನ್ನು ಗುರುತಿಸದ್ದಾಗಿದ್ದಾರೆ. ಇಂದು ಗ್ರಾಹಕ ರಕ್ಷಣೆ ಕಾನೂನು ಜಾರಿಯಲ್ಲಿದ್ದರೂ ಹೆಚ್ಚಿನ ಜನರಿಗೆ ಅದು ಗೊತ್ತಿಲ್ಲ. ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರ ಬದಲಾವಣೆ ತರುತ್ತದೆಂದು ಕುಳಿತುಕೊಳ್ಳುವಂತಿಲ್ಲ. ಜನಸಾಮಾನ್ಯರು, ಸಂಘಟನೆಗಳು ಈ ಬದಲಾವಣೆ ಉಂಟಾಗಲು ಪ್ರಯತ್ನಿಸಬೇಕು.

ಆರೋಗ್ಯ ಪಾಲನೆಯ ವಾಣಿಜ್ಯೀಕರಣವನ್ನು ಸರಿಪಡಿಸಲು ಸಾಧ್ಯ ಎಂದು ಹೇಳಬಹುದು.

ಈ ಕೆಳಗಿನ ಆರು ಅಂಶಗಳನ್ನು ಗಮನಿಸಿ :

1. ಸಾರ್ವಜನಿಕ ಕ್ಷೇತ್ರದ ಆಸ್ಪತ್ರೆ, ಪ್ರಾಥಮಿಕ ಕೇಂದ್ರಗಳ ಬಗ್ಗೆ ಜನರಲ್ಲಿ ತಿರಸ್ಕಾರ ಇದೆ. ಆದ್ದರಿಂದ ಖಾಸಗೀ ಆಸ್ಪತ್ರೆಗೆ ಹೆಚ್ಚು ಪ್ರೋತ್ಸಾಹ ದೊರಕುತ್ತಿದೆ. ವಾಣಿಜ್ಯೀಕರಣವನ್ನು ಎದುರಿಸಲು ಸಾರ್ವಜನಿಕ ಕ್ಷೇತ್ರದ ಆಸ್ಪತ್ರೆ, ಔಷಧಿ ಉದ್ಯಮವನ್ನು ಬಲಪಡಿಸಿ. ಇಂದು ಸರ್ಕಾರಿ ಆಸ್ಪತ್ರೆಗೆ ಹೋಗುವವರು, ನಿರ್ಗತಿಕರೆಂದೇ ಗುರುತಿಸಲ್ಪಡುತ್ತಾರೆ. ಸರ್ಕಾರಿ ಆಸ್ಪತ್ರೆಯ ಲೋಪದೋಷಗಳನ್ನು ಜನರು ಕೂಡಲೇ ಗುರುತಿಸುತ್ತಾರೆ. ಆದರೆ ಖಾಸಗಿ ಕ್ಷೇತರದ ಲಾಭಖೋರ ನೀತಿ ಹಾಗೂ ವಾಣಿಜ್ಯೀಕರಣ ನೀತಿಯನ್ನು ಜನರು ಗುರುತಿಸುತ್ತಿಲ್ಲ. ಸಾರ್ವಜನಿಕ ಕ್ಷೇತ್ರದ ಆಸ್ಪತ್ರೆ ಪರಿಣಾಮಕಾರಿಯಾಗುವಂತೆ ಮಾಡಲು ಸಾಧ್ಯವಿದೆ. ಆದರೆ ಖಾಸಗಿ ಕ್ಷೇತ್ರದ ವಾಣಿಜ್ಯೀಕರಣ ನೀತಿಯನ್ನು ಬದಲಿಸಲು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಬೇಕು.

2. ಸಮಂಜಸ ಚಿಕಿತ್ಸೆ, ರೋಗಿಗೆ ಶಿಕ್ಷಣ, ವೈದ್ಯ - ರೋಗಿಯ ಸಂಬಂಧದಲ್ಲಿರುವ ನಿಗೂಢತೆಯನ್ನು ಬಯಲು ಮಾಡಬೇಕು. ವೈದ್ಯರು ರೋಗಿಗೆ, ರೋಗ ಚಿಕಿತ್ಸೆ, ರೋಗ ತಡೆಗಟ್ಟುವ ವಿಧಾನಗಳನ್ನು ತಿಳಿಸಿಕೊಡಬೇಕು. ಅವರೂ ತಮಗಾದ ತೊಂದರೆ ಬಗ್ಗೆ ವೈದ್ಯರಿಂದ ಕೇಳಬೇಕು. ಈ ವಿಷಯಗಳ ಬಗ್ಗೆ ವೈದ್ಯರು ಹಾಗೂ ರೋಗಿಗಳು ಗಮನ ಹರಿಸಿದ್ದರಿಂದ, ಇತರರು ಜನರಿಗೆ ಈ ವಿಷಯಗಳನ್ನು ತಿಳಿಸಿ, ಜಾಗೃತಿಯುಂಟುಮಾಡ ಬೇಕಾಗಿದೆ. ಇದು ಸಾಧ್ಯ.

3. ವೈದ್ಯಕೀಯ ಶಿಕ್ಷಣವನ್ನು ಪರಿಶೀಲಿಸಿ ಜನರ ಅಗತ್ಯತೆಗೆ ತಕ್ಕಂತೆ ಬದಲಿಸಬೇಕು. ವೈದ್ಯಕೀಯ ವೃತ್ತಿ ಹೆಚ್ಚು ನೈತಿಕತೆ ಹಾಗೂ ಸಮಗ್ರತೆಗೆ ಗಮನಕೊಡಬೇಕು. ಎಲ್ಲ ವೈದ್ಯರು ಹಿಪಾಕ್ರೆಟಿಕ್ ಪ್ರಮಾಣ ಸ್ವೀಕರಿಸಿದ್ದರೂ ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ವ್ಯಾಪಾರೀಕರಣದ ಪ್ರಭಾವದಿಂದ, ನೈತಿಕತೆ ಅಧೋಗತಿಗಿಳಿಯಲು ಕಾರಣವಾಗಿದೆ.

4. ಖಾಸಗಿ ವೈದ್ಯಕೀಯ ವೃತ್ತಿಯನ್ನು ನಿಯಂತ್ರಿಸಬೇಕು. ಖಾಸಗೀ ವೈದ್ಯಕೀಯ ವೃತ್ತಿಗೆ ಯಾವ ನಿಯಂತ್ರಣವಿಲ್ಲದರಿಂದ ಖಾಸಗಿ ಕ್ಷೇತ್ರದಲ್ಲೇ ಹೆಚ್ಚು ವ್ಯಾಪಾರೀಕರಣವನ್ನು ಕಾಣಬಹುದು. ಸರ್ಕಾರಿ ಕ್ಷೇತ್ರ ಇದಕ್ಕೆ ಹೊರತಲ್ಲ. ಖಾಸಗಿ ಕ್ಷೇತ್ರವನ್ನು ನಿಯಂತ್ರಣ ಮಾಡುವವರಿಗೂ ವಾಣಿಜ್ಯೀಕರಣ ನಿರ್ಮೂಲನ ಮಾಡಲು ಸಾಧ್ಯವಿಲ್ಲ.

5. ವೈದ್ಯಕೀಯ ಸಂಘ ಸಂಸ್ಥೆಗಳೊಂದಿಗೆ ಚರ್ಚೆ ಮಾಡಿ, ಸಕಾರಾತ್ಮಕ ಬದಲಾವಣೆಗೆ ಪ್ರಯತ್ನಿಸಬೇಕು. ವೈದ್ಯರು ಹಲವಾರು ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿರುತ್ತಾರೆ. ಖಾಸಗೀ ವೈದ್ಯರೂ ಇವುಗಳಲ್ಲಿ ಸೇರಿರುತ್ತಾರೆ. ಈ ಸಂಘ ಸಂಸ್ಥೆಗಳು ನೀತಿಯ ವಿಷಯಗಳನ್ನು ಚರ್ಚೆ ಮಾಡಬೇಕು ಹಾಗೂ ವೈದ್ಯರ ಮೇಲೆ ಪ್ರಭಾವ ಬೀರಬೇಕು. ಮೆಡಿಕಲ್ ಕೌನ್ಸಿಲ್, ಈ ವಿಷಯದಲ್ಲಿ ವೈದ್ಯರಿಗೆ ಮಾರ್ಗದರ್ಶನ ಮಾಡಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಮೆಡಿಕಲ್ ಕೌನ್ಸಿಲ್‌ಗಳು ಭ್ರಷ್ಟಾಚಾರದಲ್ಲಿ ಮುಳುಗಿ ಈ ವಿಷಯಗಳು ಕಡೆಗಣಿಸಲ್ಪಟ್ಟಿದೆ.

6. ಸಮಾಜದ ಎಲ್ಲರೂ ವೈದ್ಯಕೀಯ ವೃತ್ತಿಯೊಂದಿಗೆ ಚರ್ಚಿಸಿ, ಒಂದು ನೀತಿ ಸಂಹಿತೆ, ಅದರ ಪಾಲನೆ ಹಾಗೂ ಪಾರದರ್ಶಿಕತೆ ಬಗ್ಗೆ ತೀರ್ಮಾನಕ್ಕೆ ಬರಬೇಕು. ಇಂದಿನ ವೈದ್ಯಕೀಯ ವ್ಯವಸ್ಥೆ ಕೇವಲ ಮಧ್ಯಮವರ್ಗ ಹಾಗೂ ಶ್ರೀಮಂತರ ಆರೋಗ್ಯ ಸುಧಾರಣೆಗೆ ತಯಾರಾಗಿ ನಿಂತಂತಿದೆ. ವೈದ್ಯಕೀಯ ವೃತ್ತಿಯಲ್ಲಿ ವೈದ್ಯರ ನೀತಿ ಉಲ್ಲಂಘನೆ ಎಲ್ಲರಿಗೂ ತೊಂದರೆ ಉಂಟುಮಾಡಹುದಾಗಿದೆ. ಆದರೆ ಇದು ಅನಕ್ಷರಸ್ತ ಹಾಗೂ ಬಡಜನರ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಬಡಜನರು ತಮ್ಮ ಅಸಹಾಯಕತೆಯನ್ನು ಹೇಳಲಾರರು. ಅದರಿಂದ ವೈದ್ಯಕೀಯ ವೃತ್ತಿ ತನ್ನ ನಿಲುವನ್ನು ಬದಲಿಸಿದ್ದರೆ ಅಪಾಯವಾಗುತ್ತದೆ.

ವ್ಯಾಪಾರೀಕರಣದ ಕೆಲವೇ ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ. ವೈದ್ಯಕೀಯ ಕ್ಷೇತ್ರದ ವ್ಯಾಪಾರೀಕರಣ, ವಾಣಿಜ್ಯೀಕರಣ, ವೈದ್ಯಕೀಯ ಕ್ಷೇತ್ರಕ್ಕೆ ಕಳಂಕ ತಂದಿದೆ. ನೀತಿ ಸನ್ನದುಗಳು ಹಲವಾರು ಇವೆ. ಆದರೆ ಅದನ್ನು ಅನುಸರಿಸುವವರು ಯಾರು? ಈ ವಿಷಯದಲ್ಲಿ ಜನರು ವೈದ್ಯರ ಮೇಲೆ ಒತ್ತಡ ತಂದರೆ ಸಾಧ್ಯವಾಗುವ ಸಾಧ್ಯತೆ ಇದೆ.

ಮುಂದಿನ ಸಂಚಿಕೆಯಲ್ಲಿ ಸರ್ಕಾರಿ ಆಸ್ಪತ್ರೆಗಳ ನಾಗರಿಕ ಸನ್ನದು, ವೈದ್ಯಕೀಯ ಕೌನ್ಸಿಲ್‌ಗಳ ಸನ್ನದು ಏನು ಎಂಬುದನ್ನು ಚರ್ಚಿಸೋಣ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಜುಲೈ 12 ರಿಂದ ಆಗಸ್ಟ್ 11, 2004**
  ಕಟ್ಟಡ ಕಾರ್ಮಿಕರ ಬೇಡಿಕೆಗಳ ಬಗ್ಗೆ ಪ್ರಚಾರಾಂದೋಲನ
- **ಜುಲೈ 29, 2004**
  ಉನ್ನತ ಶಿಕ್ಷಣಕ್ಕೆ ಶೇ.15 ಅನುದಾನ ಕಡಿತ ವಿರೋಧಿಸಿ ರಾಜ್ಯದಾದ್ಯಂತ ಕಾಲೇಜ್ ಬಂದ್ - ಎಸ್‌ಎಫ್ಐ ಕರೆ
- **ಜುಲೈ 31, 2004**
  ಜೆಎಂಎಸ್ ವತಿಯಿಂದ ವಿಚಾರ ಸಂಕಿರಣ, ಬೆಳಿಗ್ಗೆ 10 ಕ್ಕೆ, ಸೆನೆಟ್ ಹಾಲ್, ಬೆಂಗಳೂರು
  ಉದ್ಘಾಟನೆ : ದೇವಕಿ ಜೈನ್
  ಅಧ್ಯಕ್ಷತೆ : ಡಾ. ಎಂ.ಎಸ್.ತಿಮ್ಮಪ್ಪ
- **ಆಗಸ್ಟ್ 3,4 ಆಗಸ್ಟ್ 5,2004**
  ಅಖಿಲ ಭಾರತ ವಿದ್ಯಾರ್ಥಿನಿಯರ ಸಮಾವೇಶ
  ರಾಜಸ್ಥಾನ ರಾಜ್ಯದ ಗಂಗಾ ನಗರದಲ್ಲಿ
- **ಆಗಸ್ಟ್ 8, 2004**
  ಪ್ರಾದೇಶಿಕ ಅಸಮಾನತೆ ಕುರಿತು ಸಮಾವೇಶ ಸ್ಥಳ : ಗುಲ್ಬರ್ಗಾ
  ಸಿದ್ಧತಾ ಸಮಿತಿ ಅಧ್ಯಕ್ಷರು : ಶಾಂತರಸ, ಸಾಹಿತಿಗಳು
  ಕಾರ್ಯಾಧ್ಯಕ್ಷ : ಮಾರುತಿ ಮಾನ್ಪಡೆ
  ಪ್ರ ಕಾರ್ಯದರ್ಶಿ : ಆರ್.ಕೆ.ಹುಡಗಿ
- **ಆಗಸ್ಟ್ 9 ರಿಂದ 24,2004**
  ಅಂಧಶ್ರದ್ಧೆ, ಮೌಢ್ಯದ ವಿರುದ್ಧ ಜನಜಾಗೃತಿ, 24 ರಂದು ಸಮಾರೋಪ ದಾವಣಗೆರೆಯಲ್ಲಿ 4 ಜಾಥಾ
- **ಆಗಸ್ಟ್ 12,2004**
  ಖಾಸಗೀಕರಣದ ವಿರುದ್ಧ
  ಹೊಸವೇತನ ಒಪ್ಪಂದಕ್ಕೆ ಆಗ್ರಹಿಸಿ ರಾಜ್ಯದ ರಾಜಧಾನಿಗಳಲ್ಲಿ ಬ್ಯಾಂಕ್ ನೌಕರರ ಧರಣಿ
  ಬ್ಯಾಂಕ್ ನೌಕರರ ಐಕ್ಯವೇದಿಕೆಯ ಕರೆ.

ಗಾಳಿಪಟ ಸ್ಪರ್ಧೆ

ಯುವಜನರನ್ನು ಜಾಗೃತಗೊಳಿಸಲು, ನಿರುದ್ಯೋಗ, ಅಸಮಾನತೆ, ಭ್ರಷ್ಟಾಚಾರ ಇತ್ಯಾದಿಗಳ ವಿರುದ್ಧ ಸದಾ ಹೋರಾಡುತ್ತಿರುವ ಡಿವೈಎಫ್ಐ ಜಾನಪದ ಕ್ರೀಡೆಯಾದ ಗಾಳಿಪಟ ಸ್ಪರ್ಧೆಯೊಂದನ್ನು ನಡೆಸಿತು. ಪ್ರತಿವರ್ಷದಂತೆ ಏಕಾದಶಿಗೆ ದೊಡ್ಡಬಳ್ಳಾಪುರ ಡಿವೈಎಫ್ಐ ಸಾಂಸ್ಕೃತಿಕ ಉಪಸಮಿತಿ ಜುಲೈ 1 ರಂದು ನೂರಾರು ಸ್ಪರ್ಧಾಳುಗಳು ಭಾಗವಹಿಸಿದ್ದ ಈ ಕಾರ್ಯಕ್ರಮ ಸಂಘಟಿಸಿತ್ತು. ವಿಜೇತರಿಗೆ ಎರಡು ವಿಶೇಷ ಬಹುಮಾನ ಸೇರಿದಂತೆ 11 ಬಹುಮಾನ ನೀಡಲಾಯಿತು. ಈ ಸ್ಪರ್ಧೆ ವೀಕ್ಷಿಸಲು ಸಾವಿರಾರು ನಾಗರೀಕರು ಭಾಗವಹಿಸಿದ್ದರು. ಇದರಿಂದ ಹಬ್ಬದ ವಾತಾವರಣ ನಿರ್ಮಾಣಗೊಂಡಿತ್ತು.

ನಂತರ ನಡೆದ ಬಹುಮಾನ ವಿತರಣಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೆ.ಮಹಾಲಿಂಗಯ್ಯನವರು ಮಾತನಾಡಿ ಗಾಳಿಪಟ ಎಂಬುವುದು ಚೀನಾದಲ್ಲಿ ಪ್ರಾರಂಭವಾಯಿತು. ಇದು ಕ್ರಿ.ಪೂ 206 ರಲ್ಲಿ 'ಹನ್‌ಸಿನ್' ಎಂಬ ಸೇನಾಪತಿಯಿಂದ ಯುದ್ಧದ ತಂತ್ರಗಾರಿಕೆ ಫಲವಾಗಿ ಗಾಳಿಪಟ ಜನ್ಮತಾಳಿತು ಎಂದರು. ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಮಾತನಾಡಿದರು. ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಡಿವೈಎಫ್ಐ ರಾಜ್ಯಸಮಿತಿ ಸದಸ್ಯರಾದ ಪಿ.ಎ.ವೆಂಕಟೇಶ್ ಪ್ರಾಸ್ತಾವಿಕ ಭಾಷಣ ಮಾಡಿ ಡಿವೈಎಫ್ಐ ಕಲೆ, ಕ್ರೀಡೆ, ಸಾಹಿತ್ಯ ಮತ್ತು ಹೋರಾಟಗಳ ಮೂಲಕ ನಾಗರೀಕರಣ ಮಧ್ಯೆ 'ಸ್ನೇಹ' ಸೇತುವೆ ನಿರ್ಮಿಸಿದೆ ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ತಾಲ್ಲೂಕು ಅಧ್ಯಕ್ಷರಾದ ಎಲ್.ಸಂಜೀವಪ್ಪ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಚಂದ್ರು ತೇಜಸ್ವಿ, ರುದ್ರಾರಾಧ್ಯ, ಕೆ.ಸಿ.ಗೋಪಾಲ್, ರಾಮಸ್ವಾಮಿ, ಡಿ.ಕೆ.ಪ್ರಕಾಶ್ ಭಾಗವಹಿಸಿದ್ದರು.

ಸಾಂಸ್ಕೃತಿಕ ಉಪಸಮಿತಿಯ ಸಂಚಾಲಕರಾದ ಸಿ.ಅಶ್ವಥ್ ಸ್ವಾಗತಿಸಿದರೆ ಎಂ.ಚೌಡಯ್ಯ ವಂದಿಸಿದರು.

ರಾಜ್ಯದ ರೈತರ ಹಾಗೂ ಕೃಷಿ ಕೂಲಿಕಾರರ ತುರ್ತು ಬೇಡಿಕೆಗಳನ್ನು ಈಡೇರಿಸಲು ಆಗ್ರಹ

ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕೃಷಿ ಕೂಲಿಕಾರರ ಸಂಘದ ರಾಜ್ಯ ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ರಾಜ್ಯದ ರೈತರು-ಕೂಲಿಕಾರರು ಎದುರಿಸುತ್ತಿರುವ ಬೆಳೆಗಳ ಕಾಲ, ಬಿತ್ತನೆಬೀಜ, ಕೂಲಿಗಾಗಿ ಕಾಳು ಯೋಜನೆ ಫಲಾನುಭವಿಗಳಿಗೆ ತಲುಪುವಲ್ಲಿ ವಿಫಲತೆ, ಸಾಲ ಮನ್ನಾ, ವಿದ್ಯುತ್ ಕೊರತೆ, ಮತಾಂಧ ಸಮಸ್ಯೆಗಳ ಪರಿಹಾರಕ್ಕಾಗಿ ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಿತು

ರಾಜ್ಯದ ಜನತೆ, ಮುಖ್ಯವಾಗಿ ಗ್ರಾಮೀಣ ಜನತೆ ನೂತನ ಸರ್ಕಾರದ ಮೇಲೆ ಬಹಳಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡಿದೆ. ಜನತೆಯ ನ್ಯಾಯವಾದ ನಿರೀಕ್ಷೆಗಳನ್ನು ಕಡೆಗಣಿಸಿ ಅವರಿಗೆ ಖಂಡಿತವಾಗಿ ನಿರಾಶೆಯನ್ನುಂಟು ಮಾಡಲಾರಿರಿ ಎಂದು ನಾವು ಭಾವಿಸುತ್ತೇವೆ.-

ಮತದಾರರು ನೀಡಿದ ತೀರ್ಪನ್ನು ಗಮನಿಸಿದರೆ ರಾಜ್ಯದ ಜನತೆ ಬದಲಾವಣೆಯ ಪರವಾಗಿ ಮತನೀಡಿದ್ದಾರೆ ಎಂದು ಸ್ಪಷ್ಟವಾಗುತ್ತದೆ. ಹಿಂದಿನ ಸರ್ಕಾರದ ಧೋರಣೆಗಳನ್ನು ಹಾಗೂ ಕಾರ್ಯವೈಖರಿಯನ್ನು ಜನತೆ ತಿರಸ್ಕರಿಸಿದೆ. ರೈತರು, ಕೃಷಿ ಕೂಲಿಕಾರರನ್ನು ಒಳಗೊಂಡ ಗ್ರಾಮೀಣ ಜನತೆ ತಮ್ಮ ಅಸಮಾಧಾನವನ್ನು ಮತ ಪೆಟ್ಟಿಗೆಯ ಮೂಲಕ ವ್ಯಕ್ತಪಡಿಸಿದ್ದಾರೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ.

ಹಿಂದಿನ ಸರ್ಕಾರದ ವಿರುದ್ಧದ ಜನರ ಅತೃಪ್ತಿಯ ಲಾಭ ಪಡೆದು ಕೋಮುವಾದಿ ಶಕ್ತಿಗಳು ರಾಜ್ಯದಲ್ಲಿ ಅಧಿಕಾರದ ಗದ್ದುಗೆಯನ್ನೇರಲು ವಿಫಲ ಪ್ರಯತ್ನ ಮಾಡಿವೆ. ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡಲು ಹೊರಟ ಈ ಶಕ್ತಿಗಳ ಅಪಾಯವನ್ನು ಕಡೆಗಣಿಸಲಾಗದು. ಜನತೆಯ ನೆಮ್ಮದಿಗೆ ಭಂಗ ತರಲೆತ್ನಿಸುವ ಈ ಶಕ್ತಿಗಳನ್ನು ಹಿಮ್ಮೆಟ್ಟಿಸಲು ದೃಢವಾದ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಿದೆ.



ಕೋಮುವಾದಿ ಶಕ್ತಿಗಳು ಅಧಿಕಾರವಹಿಸಿಕೊಳ್ಳುವುದನ್ನು ತಡೆಯಲು, ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳು ಕೂಡಿಕೊಂಡು ಒಂದು ಜಾತ್ಯಾತೀತ ಸರ್ಕಾರವನ್ನು ರಚಿಸಲು ಸಾಧ್ಯವಾಗಿರುವುದನ್ನು ನಾವು ಸ್ವಾಗತಿಸುತ್ತೇವೆ.

ರಾಜ್ಯದ ಜನತೆಯನ್ನು ಕಾಡುತ್ತಿರುವ ಮುಖ್ಯ ಪ್ರಶ್ನೆಗಳನ್ನು ಇತ್ಯರ್ಥಪಡಿಸಲು ಪ್ರಾಮಾಣಿಕ ವಾಗಿ ಪ್ರಯತ್ನ ಪಡುತ್ತಾ ಈ ಸಮ್ಮಿಶ್ರ ಸರ್ಕಾರ ಐದು ವರ್ಷಗಳ ಅಧಿಕಾರ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸು ವಂತಾಗಲೆಂದು ಹಾರೈಸುತ್ತೇವೆ.

ಉದಾರೀಕರಣ, ಜಾಗತೀಕರಣ ನೀತಿಗಳ ಫಲವಾಗಿ ತೀವ್ರ ಸಂಕಷ್ಟಕ್ಕೆ ಒಳಗಾಗಿರುವ ರೈತರ, ಕೃಷಿಕೂಲಿಕಾರರ ನೆರವಿಗೆ ಧಾವಿಸಬೇಕಾದುದು ತಮ್ಮ ಸರ್ಕಾರದ ಪ್ರಥಮ ಆದ್ಯತೆಯಾಗಬೇಕೆಂದು ನಾವು ಅಪೇಕ್ಷಿಸುತ್ತೇವೆ. ನಾಡಿನ ರೈತರ ಮತ್ತು ಕೃಷಿ ಕೂಲಿಕಾರರ ಹಿತರಕ್ಷಣೆಗಾಗಿ ತಮ್ಮ ಸರ್ಕಾರವು ಘೋಷಿಸಿರುವ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ'ದಲ್ಲಿ ಪ್ರಕಟಿಸಿರುವ ಕೆಲವು ಸಕಾರಾತ್ಮಕ ಭರವಸೆಗಳನ್ನು ನಾವು ಸ್ವಾಗತಿಸುತ್ತೇವೆ. ರೈತರಿಗೆ ಶೇ.6 ರ ದರದಲ್ಲಿ ಕೃಷಿ ಸಾಲ ಒದಗಿಸುವುದು, ಅಸಲಿಗಿಂತ ಹೆಚ್ಚು ಬಡ್ಡಿ ಮತ್ತು ಸುಸ್ತಿ ಬಡ್ಡಿ ಪಾವತಿ ಮಾಡಿರುವ ರೈತರ ಸಾಲಗಳನ್ನು ಮನ್ನಾ ಮಾಡುವುದು, ರೈತರ ಪಂಪ್‌ಸೆಟ್‌ಗಳಿಗೆ ರಿಯಾಯ್ತಿ ದರಗಳಲ್ಲಿ ವಿದ್ಯುತ್ ಪೂರೈಕೆ, ಕೃಷಿ ಕಾರ್ಮಿಕರ ಮತ್ತು ಸಣ್ಣ ರೈತರ ಸಂಜೀವಿನಿ ವಿಮೆ ಯೋಜನೆಯ ಕಂತುಗಳನ್ನು ಸರ್ಕಾರವೇ ಭರಿಸುವುದು, ಬಡವರಿಗೆ 3 ರೂಪಾಯಿಗೆ ಕಿಲೋ ಅಕ್ಕಿ. ಮೊದಲಾದ ಭರವಸೆಗಳು ಸರಿಯಾದ ದಿಕ್ಕಿನಲ್ಲಿಟ್ಟ ಹೆಜ್ಜೆಗಳಾಗಿವೆ. ಇವುಗಳಿಗಾಗಿ ಬಜೆಟ್‌ನಲ್ಲಿ ಹಣ ಒದಗಿಸಲು ಕ್ರಮ ವಹಿಸಿರುವುದನ್ನು ನಾವು ಸ್ವಾಗತಿಸುತ್ತೇವೆ.

ಆದರೆ ಇದು ಏನೇನೂ ಸಾಲದು. ರೈತರ ಆತ್ಮಹತ್ಯೆಗಳು ಹಾಗೂ ಕೂಲಿಕಾರರ ಹಸಿವಿನ ಸಾವುಗಳನ್ನು ತಡೆಯಲು ಸಹಕಾರಿಯಾಗಿಲ್ಲ. ಜನರ ನಿರೀಕ್ಷೆಗೂ ನಿಮ್ಮ ಭರವಸೆಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ರೈತರಿಗೆ - ಸಾಲ ಸೌಲಭ್ಯ, ಸಬ್ಸಿಡಿ ಸಹಿತದ ಬೀಜ, ಗೊಬ್ಬರ, ಕೀಟನಾಶಕಗಳು, ಭೂಮಿಯ ಪ್ರಶ್ನೆ, ನೀರಾವರಿ, ವಿದ್ಯುತ್, ವಿಮೆ, ಮಾರುಕಟ್ಟೆ ನೆರವು, ಕೃಷಿ ಕೂಲಿಕಾರರಿಗೆ- ಉದ್ಯೋಗ, ಕನಿಷ್ಠ ಕೂಲಿ, ಸಾಮಾಜಿಕ ಸಂರಕ್ಷಣೆ, ಸಾಲಸೌಲಭ್ಯ, ವಸತಿ ಸೌಕರ್ಯ, ರೇಷನ್ ಕಾರ್ಡುಗಳ ವಿತರಣೆ ಮೊದಲಾದ ಕೆಲವು ಮಹತ್ವದ ವಿಷಯಗಳಲ್ಲಿ ಸರ್ಕಾರ ದೃಢವಾದ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಬೇಕಾಗಿದೆ.

ಆದ್ದರಿಂದ ರಾಜ್ಯದ ರೈತರ ಮತ್ತು ಕೃಷಿ ಕೂಲಿಕಾರರ ಕೆಲವು ಮುಖ್ಯ ಹಾಗೂ ತುರ್ತು ಪ್ರಶ್ನೆಗಳನ್ನು ನಾವು ಈ ಮನವಿಯ ಮೂಲಕ ತಮ್ಮ ಸರ್ಕಾರದ ಗಮನಕ್ಕೆ ತರಬಯಸುತ್ತೇವೆ. ಇವುಗಳಲ್ಲಿ ಒಂದೊಂದನ್ನು ತಮ್ಮೊಂದಿಗೆ ನಾವು ಚರ್ಚಿಸಲು ಬಯಸುತ್ತೇವೆ. ದಯವಿಟ್ಟು ಇದಕ್ಕಾಗಿ ಒಂದು ದಿನ ತಾವು ಬಿಡುವು ಮಾಡಿಕೊಂಡು, ಸಮಯವನ್ನು ನಿಗದಿಪಡಿಸಿ ಎಲ್ಲಾ ರೈತ-ಕೂಲಿಕಾರರ ಸಂಘಟನೆಗಳ ಪ್ರತಿನಿಧಿಗಳನ್ನು ಮಾತುಕತೆಗೆ ಆಹ್ವಾನಿಸಬೇಕೆಂದು ಕೋರುತ್ತೇವೆ.

ಕುಡಿಯುವ ನೀರು ಪೂರೈಕೆ ಹೆಸರಿನಲ್ಲಿ ಜನರ ಹಣ ಲೂಟಿ ವಿರುದ್ಧ ಪ್ರತಿಭಟನೆ



ಬೆಂಗಳೂರು ಮಹಾನಗರ ವ್ಯಾಪ್ತಿಯ ಬೊಮ್ಮನಹಳ್ಳಿ, ಬ್ಯಾಟರಾಯನಪುರ, ದಾಸರಹಳ್ಳಿ, ಕೃಷ್ಣರಾಜಪುರ, ಮಹದೇವಪುರ, ರಾಜರಾಜೇಶ್ವರಿ ನಗರ ಮತ್ತು ಯಲಹಂಕ ನಗರಸಭೆ ಮತ್ತು ಕೆಂಗೇರಿ ಪುರಸಭೆ ಪ್ರದೇಶಗಳಿಗೆ ಒಟ್ಟು ರೂ. 658.65 ಕೋಟಿ ಅಂದಾಜು ವೆಚ್ಚದಲ್ಲಿ ನೀರು ಪೂರೈಕೆ ಮತ್ತು ಒಳಚರಂಡಿ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ. ಇದರಲ್ಲಿ ನಿವೇಶನದಾರರಿಂದ ಬಂಡವಾಳವಂತಿಗೆ ರೂಪದಲ್ಲಿ ಸಂಗ್ರಹಿಸುತ್ತೇವೆಂದು ಹೇಳುತ್ತಿರುವ ಮೊತ್ತ ರೂ.120 ಕೋಟಿ. ಆದರೆ ವಾಸ್ತವವಾಗಿ ಜನರಿಂದ ಸಂಗ್ರಹಿಸುತ್ತಿರುವ ಮೊತ್ತ ಸುಮಾರು ... ಕೋಟಿಗೂ ಹೆಚ್ಚು.

ಗೃಹಬಳಕೆ ಮತ್ತು ಗೃಹೇತರ ಬಳಕೆ ಸೇರಿದಂತೆ ರೂ.10 ಸಾವಿರದಿಂದ 25 ಸಾವಿರದವರೆಗೆ ಪ್ರತಿ ನಿವೇಶನಗಳಿಂದ ವಸೂಲಿ ಮಾಡುತ್ತಿದೆ. ಇದು ಜನಸಾಮಾನ್ಯರ ಹಣದ ಲೂಟಿಯಲ್ಲದೆ ಮತ್ತೇನೂ ಅಲ್ಲ. ಹಿಂದೆ ಇದೇ ನಗರ ಸಭೆಗಳ ವ್ಯಾಪ್ತಿಯಲ್ಲಿ ನೂರಾರು ಕೋಟಿ ರೂಗಳನ್ನು ನುಂಗಿಹಾಕಿದ ಉದಾಹರಣೆ ಇನ್ನೂ ಜನರ ಮನಸ್ಸಿನಲ್ಲೇ ಇರುವಾಗ ಅಕ್ರಮ ಹಣ ವಸೂಲಿಗೆ ಸರ್ಕಾರ ಮುಂದಾಗಿರುವುದು ಖಂಡನೀಯ.

ಭ್ರಷ್ಟರ, ಕಳ್ಳರ, ಶ್ರೀಮಂತರ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಸೇವೆಗೆ ಬಡಜನರ, ಜನ ಸಾಮಾನ್ಯರನ್ನು ಸುಲಿಗೆ ಮಾಡುವುದನ್ನು ಪ್ರತಿಭಟಿಸಿ ಜುಲೈ 13 ರಂದು ದಾಸರಹಳ್ಳಿ ಸಿಎಂಸಿ ಎದುರು ಯಶವಂತಪುರ ಪ್ರದೇಶ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಸ್ಥಳೀಯರು ಸೇರಿದಂತೆ ನಾನೂರಕ್ಕು ಹೆಚ್ಚು ಜನರು ಒಂದು ದಿನದ ಧರಣಿ ನಡೆಸಿದರು.

ಧರಣಿಯನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪ್ರಕಾಶ್, ಸ್ಥಳೀಯ ಸಮಿತಿ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಸಿಐಟಿಯು ಮುಖಂಡರಾದ ನಂಜರಾಜ್, ಲೀಲಾವತಿ, ಶಿವ ರುದ್ರಯ್ಯ, ಸ್ಥಳೀಯರಾದ ಚಂದ್ರಶೇಖರ್ ಮೊದಲಾದವರು ಮಾತನಾಡಿದರು. ಗಂಗಣ್ಣ ಕಾರ್ಯಕ್ರಮ ನಿರೂಪಿಸಿದರು.

ಈ ಧರಣಿಯಲ್ಲಿ ಹಾವನೂರು ಬಡಾವಣೆ, ಎಂಜಿಜಿ ಲೇಔಟ್, ದಾಸರಹಳ್ಳಿಯ ಕನ್ನಡ ಸಂಘ, ಹೆಗ್ಗನಹಳ್ಳಿ, ಪೀಣ್ಯಾದ ರವೀಂದ್ರ ನಗರ ವಾಸಿಗಳಲ್ಲದೆ ಕಾರ್ಮಿಕರು ಮತ್ತು ಮಹಿಳೆಯರು ಪಾಲ್ಗೊಂಡಿದ್ದರು.

ನರಗುಂದ - ನವಲಗುಂದ ರೈತ ಬಂಡಾಯದ ಸ್ಮರಣೆ

ಸತತವಾಗಿ ಕಳೆದ ನಾಲ್ಕು ವರ್ಷಗಳಿಂದ ಬರಗಾಲದಿಂದ ತತ್ತರಿಸಿರುವ ರೈತಾಪಿ ಜನ ಸಾಲದ ಚಕ್ರವ್ಯೂಹದಿಂದ ಪಾರಾಗಲು ಸಾಧ್ಯವಾಗದೆ ರೈತರು ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ಈ ಸಂದರ್ಭದಲ್ಲಿ ರೈತನ ನೆರವಿಗೆ ಧಾವಿಸದಿದ್ದರೆ ಯಾವುದೇ ಸರಕಾರಗಳಿಗೆ ಉಳಿಗಾಲವಿಲ್ಲ" ಎಂದು ವ್ಹಿ.ಪಿ.ಕುಲಕರ್ಣಿ ಮಾತನಾಡುತ್ತಾ ತಿಳಿಸಿದರು.

ನರಗುಂದ- ನವಲಗುಂದ ರೈತ ಬಂಡಾಯದ ಹುತಾತ್ಮರ ದಿನಾಚರಣೆ ಸಂದರ್ಭದಲ್ಲಿ ರಾಮದುರ್ಗದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ತೀವ್ರವಾಗಿರುವ ಸಾಲದ ಸಮಸ್ಯೆಯ ಬಗ್ಗೆ ಮಾತನಾಡಿದ ಅವರು ಇಡೀ ತಾಲೂಕಿನಲ್ಲಿ ಒಟ್ಟು ಕೃಷಿ ಸಾಲದ ಅಂಕಿ-ಅಂಶಗಳನ್ನು ಸಭೆಯ ಮುಂದಿಟ್ಟರು. ರೈತಪರ ಎಂದು ಹೇಳಿಕೊಳ್ಳುವ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಬಜೆಟ್‌ಗಳಲ್ಲಿ ಸರಿಯಾದ ಪರಿಹಾರ ದೊರೆತಿಲ್ಲ ಎಂದು ದೂರಿದರು.

ಆತ್ಮಹತ್ಯೆ ಪರಿಹಾರ ಅಲ್ಲ; ಬದಲಾಗಿ ಸಂಘಟಿತ ಹೋರಾಟದಿಂದ ಮತ್ತು ಪರಿಹಾರ ಪಡೆಯಲು ಸಾಧ್ಯವಾಗುತ್ತದೆ. ರಾಮದುರ್ಗ ತಾಲೂಕಿನಲ್ಲಿ ವಿಶಾಲ ಹಾಗೂ ಐಕ್ಯರೈತ ಹೋರಾಟಕ್ಕೆ ಇಂದಿನ ಸಂದರ್ಭ ಕಾರಣವಾಗಲಿ ಎಂದು ಆಶಿಸಿದರು.

ಹಿರಿಯ ರೈತ ಮುಖಂಡರಾದ ಎಸ್.ಹೆಚ್. ಕಪ್ಪಣ್ಣವರ ಮಾತನಾಡಿ ನರಗುಂದ- ನವಲಗುಂದ ರೈತ ಬಂಡಾಯದ ನೆನಪುಗಳನ್ನು ಸಭೆಗೆ ನೀಡಿದರು.

ರೈತ ಬಂಡಾಯದ ರೂವಾರಿ ಬಿ.ಎಸ್.ಸೊಪ್ಪಿನ ಮಾತನಾಡಿ ಭಾರಿ ಕೈಗಾರಿಕೋದ್ಯಮಿಗಳಿಗೆ ನೀಡಿರುವ ಸಾಲ ಹಾಗೂ ರಿಯಾಯತಿಗಳ ಅಂಕಿ-ಅಂಶ ನೀಡಿ ಕೃಷಿ ವಲಯಕ್ಕೆ ಮಾತ್ರ ಸಾಲ ಹಾಗೂ ರಿಯಾಯತಿ ಸರಿಯಾಗಿ ದೊರೆಯುತ್ತಿಲ್ಲ. ಸಂಘಟಿತ ಹೋರಾಟ ಅವಶ್ಯ ಎಂದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಹಿರಿಯ ರೈತ ಮುಖಂಡ ಶ್ರೀ ಬಾಬಾಗೌಡ ಪಾಟೀಲರು ಮಾತನಾಡಿ ರೈತರು ಸ್ವಾಭಿಮಾನದಿಂದ ಜೀವಿಸುವುದನ್ನು ಕಲಿಯಬೇಕು' ರೈತ ಹುತಾತ್ಮರಿಗೆ ಸೂಕ್ತ ಶ್ರದ್ಧಾಂಜಲಿ ಸಲ್ಲಿಸುವುದೆಂದರೆ ಸಮರಶೀಲ ಸಂಘಟನೆ ಕಟ್ಟುವುದರಿಂದ ಮಾತ್ರ ಎಂದು ಅವರು ಗ್ಯಾಟ್ ಒಪ್ಪಂದದ ಪರಿಣಾಮಗಳು ಜಾರಿಗೆ ಬರಲಿರುವ ಮುಂದಿನ ದಿನಗಳು ಸಂಘರ್ಷಪೂರ್ಣವಾಗಿರುತ್ತವೆ ಎಂದು ವಿವರಿಸಿದರು.

ಹಿರಿಯ ರೈತ ಮುಖಂಡರಾದ ಶ್ರೀಕಂಠಯ್ಯ ಹಿರೇಮಠ, ಚನ್ನಪ್ಪಗೌಡ ಪಾಟೀಲ, ತಾಲೂಕಾ ಪಂಚಾಯತ ಅಧ್ಯಕ್ಷ ಶಿವಪ್ಪ ಹಂಪಿಹೊಳಿ ಮುಂತಾದವರು ವೇದಿಕೆ ಮೇಲಿದ್ದರು.

ತಾಲೂಕಿನ 78 ಗ್ರಾಮಗಳಿಂದ ಜನರು ಪಾಲ್ಗೊಂಡಿದ್ದ ಈ ರೈತ ಸಮಾವೇಶವು ತಾಲೂಕಿನ ರೈತರ ಸಾಲದ ಸಮಸ್ಯೆ ಹಾಗೂ ತಾಲೂಕಿನ ಸಮಗ್ರ ನೀರಾವರಿ ಯೋಜನೆಗಳಿಗಾಗಿ ಚರ್ಚೆ ನಡೆಸಿ ಮುಂದಿನ ಹೋರಾಟಕ್ಕೆ ಕಾರ್ಯಕ್ರಮ ಹಮ್ಮಿಕೊಂಡಿತು.

ಗೈಬು ಎಂ.ಜೈನೆಖಾನ ಸ್ವಾಗತಿಸಿದರು. ಸಿದ್ರಾಮಪ್ಪ ಬೇಗೂರ ವಂದಿಸಿದರು.



2004-05 ರ ಬಜೆಟ್ ಕೆಲವು ಸ್ವಾಗತಾರ್ಹವಾದ ಅಂಶಗಳನ್ನು ಒಳಗೊಂಡಿದ್ದು ನಿಜವಾಗಿದ್ದರೂ ಇತ್ತೀಚಿನ ಜನಾದೇಶವನ್ನು ಪ್ರತಿಬಿಂಬಿಸುವಲ್ಲಿ ಅದು ಸಫಲವಾಗಿಲ್ಲ. 'ಬದಲಾವಣೆಗಾಗಿ' ಮತ ನೀಡಿದ ಜನತೆಗೆ ಈ ಬಜೆಟ್ ನಿರಾಶೆಯನ್ನೇ ನೀಡಿದೆ.

ಕಳೆದುಕೊಂಡಂತಾಗಿದೆ. ಸಮ್ಮಿಶ್ರ ಸರ್ಕಾರದ ಚೊಚ್ಚಲ ಬಜೆಟ್ ಒಂದು ಚೊಚ್ಚಲ ಅವಕಾಶವೇ ಆಗಿತ್ತು.


2004-05 ರ ಬಜೆಟ್ ಕೆಲವು ಸ್ವಾಗತಾರ್ಹವಾದ ಅಂಶಗಳನ್ನು ಒಳಗೊಂಡಿದ್ದು ನಿಜವಾಗಿದ್ದರೂ ಇತ್ತೀಚಿನ ಜನಾದೇಶವನ್ನು ಪ್ರತಿಬಿಂಬಿಸುವಲ್ಲಿ ಅದು ಸಫಲವಾಗಿಲ್ಲ. 'ಬದಲಾವಣೆಗಾಗಿ' ಮತ ನೀಡಿದ ಜನತೆಗೆ ಈ

ಮಾಡಬೇಕು ಎಂದಷ್ಟೆ ಅವರ ಬೇಡಿಕೆಯಾಗಿದೆ. ಕೊಳ್ಳುವ ಸಾಮರ್ಥ್ಯ ಹೆಚ್ಚಿಗೆ ಇರುವ ಗ್ರಾಹಕರಿಗೆ ಹೆಚ್ಚಿನ ದರಗಳಲ್ಲಿ ಒದಗಿಸಿ, ಕಡಿಮೆ ಸಾಮರ್ಥ್ಯ ಇರುವರಿಗೆ ಕ್ರಾಸ್ ಸಬ್ಸಿಡಿ ನೀಡಬೇಕೆಂಬುದು ಈ ಬೇಡಿಕೆ ಹಿಂದಿನ ನ್ಯಾಯ. ಆದರೆ ವಿಶ್ವಬ್ಯಾಂಕ್ ಸಬ್ಸಿಡಿಯನ್ನು, ಕ್ರಾಸ್ ಸಬ್ಸಿಡಿಯನ್ನು ಒಪ್ಪುವುದಿಲ್ಲ. ವಿದ್ಯುತ್ ಬಳಕೆ ಮಾಡುವವರು ಅದರ ... ತೆರಬೇಕು. ಎಲ್ಲರಿಗೂ ಒಂದೇ ದರ ವಿರಬೇಕು.


ಜನಾದೇಶ ಕಡೆಗಣಿಸಿದ

ಕರ್ನಾಟಕದ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಅಧಿಕಾರವಹಿಸಿಕೊಂಡಿರುವ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳ ಪಕ್ಷಗಳ ಸಮ್ಮಿಶ್ರ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಹಾಗೂ ಹಣಕಾಸು ಮಂತ್ರಿಯೂ ಆಗಿರುವ ಸಿದ್ಧರಾಮಯ್ಯನವರು ತಮ್ಮ ಚೊಚ್ಚಲ ಬಜೆಟ್ ಮಂಡಿಸಿದ್ದಾರೆ. 1995 ರಿಂದ 1999 ರ ನಡುವಿನ ಅವಧಿಯಲ್ಲಿ ಅಧಿಕಾರದಲ್ಲಿದ್ದ ಜನತಾದಳ ಸರ್ಕಾರದ ಹಣಕಾಸು ಮಂತ್ರಿಗಳಾಗಿ ಇದೇ ಸಿದ್ಧರಾಮಯ್ಯನವರು ಸತತವಾಗಿ 5 ಬಾರಿ ಬಜೆಟ್‌ಗಳನ್ನು ಮಂಡಿಸಿದ್ದರು. ಕಳೆದ 8 ವರ್ಷಗಳ ಸುದೀರ್ಘ ಅವಧಿಯ ನಂತರ ಪ್ರಥಮ ಬಾರಿಗೆ 72.83 ಕೋಟಿ ರೂ.ಗಳ ಉಳಿತಾಯ ಬಜೆಟ್ ಮಂಡಿಸಿರುವ ಸಂತಸ ಸಿದ್ಧರಾಮಯ್ಯನವರದಾಗಿದೆ. ಇದೊಂದು 'ರೈತರ ಪರವಾದ' ಬಜೆಟ್ ಎಂದೂ, ರಾಜ್ಯದ ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತಿದೆ ಎಂದು ವರ್ಣಿಸಲಾಗುತ್ತಿದೆ. ಆದರೆ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಶತಪ್ರಯತ್ನ ಮಾಡಿ ವಿಫಲವಾದ ಬಿಜೆಪಿ ಈ ಬಜೆಟ್ 'ಒಂದು ಸುಳ್ಳಿನ ಕಂತೆ' ಎಂದೂ ಬಣ್ಣಿಸಿದೆ. ಯಾರು ಸರಿ? ಯಾರು ತಪ್ಪು?

'ಜಾತ್ಯಾತೀತ ಶಕ್ತಿಗಳ ವಿಜಯದ ಸಂಕೇತವಾಗಿ ಈ ಸಮ್ಮಿಶ್ರ ಸರ್ಕಾರ ಹೊರ ಹೊಮ್ಮಿದೆ' ಎಂದು ಸಿದ್ಧರಾಮಯ್ಯನವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿರುವುದು ಸತ್ಯ ಸಂಗತಿ. ಬಿಜೆಪಿಗೆ ಅತಿ ಹೆಚ್ಚು ಸ್ಥಾನಗಳನ್ನು ಪಡೆಯಲು ಸಾಧ್ಯವಾಗಿದ್ದರೂ ಸ್ವಂತ ಶಕ್ತಿಯ ಮೇಲೆ ಅಧಿಕಾರ ವಹಿಸಿಕೊಳ್ಳಲು ಸಾಧ್ಯವಿರಲಿಲ್ಲ. ಆಗ ಅನಿವಾರ್ಯವಾಗಿ ಬಿಜೆಪಿ ವಿರುದ್ಧ ಹೋರಾಡಿದ ಕಾಂಗ್ರೆಸ್ ಮತ್ತು ಜಾತ್ಯಾತೀತ ಜನತಾದಳ ಪಕ್ಷಗಳು ಒಟ್ಟಿಗೆ ಬಂದು ಸರ್ಕಾರವನ್ನು ರಚಿಸುವಂತಾಯಿತು. ಬಿಜೆಪಿ ವಿರುದ್ಧ ವ್ಯಕ್ತವಾದ ಜನಾದೇಶ ಆ ಮೂಲಕ ಜಾರಿಗೆ ಬರುವಂತಾಯಿತು. ಜನತೆಯ ಈ ಸ್ಪಷ್ಟ ಆದೇಶಕ್ಕೆ ತಕ್ಕಂತೆ ರಾಜ್ಯದಲ್ಲಿ ಜಾತ್ಯಾತೀತ ಮೌಲ್ಯಗಳನ್ನು ದೃಢವಾಗಿ ಎತ್ತಿಹಿಡಿಯುವುದು ಮತ್ತು ಬಲಪಡಿಸಿದ್ದು ಈ ಸಮ್ಮಿಶ್ರ ಸರ್ಕಾರದ ಪ್ರಥಮ ಆಧ್ಯತೆಯಾಗಬೇಕಾಗಿದೆ.



ಜನತೆ ಬದಲಾವಣೆ ಬಯಸಿದೆ: "ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಕರ್ನಾಟಕದ ಜನತೆ ಬದಲಾವಣೆಯನ್ನು ಬಯಸಿ ಮತ ಚಲಾಯಿಸಿದ್ದಾರೆ'' ಎಂದು ಸ್ವತಃ ಸಿದ್ಧರಾಮಯ್ಯನವರು ತಮ್ಮ ಬಜೆಟ್ ಭಾಷಣದಲ್ಲಿ ಆರಂಭದಲ್ಲೇ ಹೇಳಿದ್ದಾರೆ. ಅಂದರೆ ರಾಜ್ಯದ ಜನತೆ ಹಿಂದಿನ ಸರ್ಕಾರದ ಧೋರಣೆಗಳನ್ನು ತಿರಸ್ಕರಿಸಿದ್ದಾರೆ; ಹಿಂದಿನ ಸರ್ಕಾರದ ಕಾರ್ಯವೈಖರಿಯನ್ನು ತಿರಸ್ಕರಿಸಿದ್ದಾರೆ. ರೈತರಿಂದ ಸಬ್ಸಿಡಿಗಳನ್ನು ಕಿತ್ತುಕೊಳ್ಳುವ, ಅವರ ಫಸಲಿಗೆ ನಿಯಾಯವಾದ ಬೆಲೆ ನೀಡಲು ವಿಲವಾದ ಅವರು ಸಾಲದ ಸುಳಿಗೆ ಸಿಲುಕಿ ಸಾಯುತ್ತಿರುವಾಗ ನೆರವಿಗೆ ಬಾರದ ಸರ್ಕಾರದ ನೀತಿಗಳನ್ನು ಜನ ತಿರಸ್ಕರಿಸಿದ್ದಾರೆ. ಬೇತಾಳದಂತೆ ಬೆನ್ನುಹತ್ತಿದ ಬರಗಾಲದಿಂದ ದಿಕ್ಕೆಟ್ಟ ಗ್ರಾಮೀಣ ಜನತೆ ಬದುಕನ್ನು ಅರಸಿ ಬೀದಿ ಬೀದಿ ಅಲೆಯುವಾಗ ಸ್ಪಂದಿಸದ ಸರ್ಕಾರವನ್ನು ಕಿತ್ತುಹಾಕುವ ಸಾಹಸವನ್ನು ಮಾಡಿದ್ದಾರೆ. ಕಷ್ಟಪಟ್ಟು ಓದಿ, ಒಂದು ನೆಮ್ಮದಿಯ ಜೀವನದ ಕನಸುಗಳನ್ನು ಹೊತ್ತು ಯಾವುದಾದರೊಂದು ಉದ್ಯೋಗ ಸಿಕ್ಕರೆ ಸಾಕು ಎಂದು ಪರದಾಡುವ ನವತರುಣರು ಹತಾಶರಾಗಿ ಮತಪೆಟ್ಟಿಗೆಯಲ್ಲಿ ತಮ್ಮ ಆಕ್ರೋಶವನ್ನು ಸ್ಫೋಟಿಸಿದ್ದಾರೆ. ಸ್ಪಷ್ಟವಾಗಿ ಹೇಳುವುದಾದರೆ, ರಾಜ್ಯದ ಜನತೆ, ಹಿಂದಿನ ಸರ್ಕಾರವು ಅನುಸರಿಸುತ್ತಿದ್ದ ವಿಶ್ವ ಬ್ಯಾಂಕ್ ನಿರ್ದೇಶಿತ ಉದಾರೀಕರಣ, ಖಾಸಗೀಕರಣ ನೀತಿಗಳನ್ನು ತಿರಸ್ಕರಿಸಿದ್ದಾರೆ; ಪರ್ಯಾಯ ನೀತಿಗಳಿಗಾಗಿ ಮತ ನೀಡಿದ್ದಾರೆ. ಕಾಂಗ್ರೆಸ್ಸನ್ನು ತಿರಸ್ಕರಿಸಿ ಸುಮಾರು 79 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಪರವಾಗಿ ಮತ ನೀಡಿದಾಗಲೂ ಜನತೆ ಕಾಂಗ್ರೆಸ್ ಸರ್ಕಾರದ ವೈಫಲ್ಯದ ವಿರುದ್ಧ ತಮ್ಮ ತೀರ್ಪು ನೀಡಿದ್ದಾರೆ. ಕಾಂಗ್ರೆಸ್ ವಿರುದ್ಧದ ಜನತೆಯ ಅತೃಪ್ತಿಯ ಹೆಚ್ಚಿನ ಲಾಭ ಬಿಜೆಪಿಗೆ ಆಗಿದೆ. ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡಲು ಹೊರಟಿದ್ದ ಶಕ್ತಿಗಳಿಗೆ ಕರ್ನಾಟಕದ ಜನತೆ ಮತ ನೀಡಲು ಹಿಂದಿನ ಕಾಂಗ್ರೆಸ್ ಸರ್ಕಾರದ ದುರಾಡಳಿತವೇ ಕಾರಣ. ನಮಗೆ ಕಾಂಗ್ರೆಸ್ ಬೇಡ ಎಂದು ಜನತೆ ನೀಡಿದ ತೀರ್ಪು ಬಿಜೆಪಿಗೆ ವರದಾನವಾಗಿದೆ. ಜನಾದೇಶದ ಈ ಮರ್ಮವನ್ನು ಹೊಸ ಸಮ್ಮಿಶ್ರ ಸರ್ಕಾರ ಸರಿಯಾಗಿ ಅರ್ಥ ಮಾಡಿಕೊಂಡು ಪರ್ಯಾಯ ದಾರಿಯಲ್ಲಿ ಸಾಗುವುದು ಜನರ ನಿರೀಕ್ಷೆಯಾಗಿದೆ.



ಹುಸಿಯಾದ ನಿರೀಕ್ಷೆ: ಕರ್ನಾಟಕದ ಜನತೆಯ ನಿರೀಕ್ಷೆಗಳಿಗೆ ಸ್ಪಂಧಿಸುವ ಒಂದು ಚೊಚ್ಚಲ ಅವಕಾಶವನ್ನು ರಾಜ್ಯದ ಸಮ್ಮಿಶ್ರ ಸರ್ಕಾರ

ಬಜೆಟ್ ನಿರಾಶೆಯನ್ನೇ ನೀಡಿದೆ.

ಹಿಂದಿನ ಸರ್ಕಾರದ ಅವಧಿಯಲ್ಲಿ ಸರ್ಕಾರ ಪಾವತಿಸಬೇಕಾಗಿರುವ ಸಾಲದ ಮೊತ್ತ 12,465 ಕೋಟಿ ರೂ.ಗಳಿಂದ 30,188 ಕೋಟಿ ರೂ.ಗಳಿಗೆ ಏರಿಕೆಯಾಗಿದೆ ಎಂದು ಒಪ್ಪಿಕೊಂಡಿರುವ ಹಣಕಾಸು ಮಂತ್ರಿಗಳು ಭವಿಷ್ಯದಲ್ಲಿ ನಮ್ಮ ಎತ್ತುವಳಿಗಳು ಸಾಲದ ಲಭ್ಯತೆಗಿಂತ ಹೆಚ್ಚಾಗಿ ನಮ್ಮ ಸಾಲ ಮರುಪಾವತಿಯ ಸಾಮರ್ಥ್ಯವನ್ನು ಆಧರಿಸಬೇಕಾಗುತ್ತದೆ ಎಂದು ಹೇಳಿದ್ದಾರೆ. ಇದು ಅತ್ಯಂತ ಸ್ವಾಗತಾರ್ಹವಾದ ವಿಚಾರ. ಇನ್ನುಮುಂದೆ ಸಾಲ ತೀರಿಸುವ ನಮ್ಮ ಶಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸಾಲವನ್ನು ಪಡೆಯಬೇಕೆ ವಿನಾ ಹಿಂದಿನಂತೆ ವಿಶ್ವ ಬ್ಯಾಂಕಿನಿಂದ ಸಾಲ ಸಿಗುತ್ತದೆ ಎಂದಾಗಲೆಲ್ಲಾ ಬಾಚಿಗೊಳ್ಳುವುದಲ್ಲ ಎಂಬುದು ಪ್ರಬುದ್ಧವಾದ ಆಲೋಚನೆಯಾಗಿದೆ. ಇಲ್ಲಿ ಹೊಸ ಸರ್ಕಾರವು ಹಿಂದಿನ ಸರ್ಕಾರದ ಧೋರಣೆಗಳಿಂದ ಭಿನ್ನವಾದ ದಾರಿಯಲ್ಲಿ ಸಾಗಲು ಮನಸ್ಸು ಮಾಡಿದಂತೆ ಕಾಣುತ್ತದೆ. ರೈತರಿಗೆ ಅಗ್ಗದ ಸಾಲ ವ್ಯವಸ್ಥೆ, ಕಡು ಬಡವರಿಗೆ ಅಗ್ಗದ ಕಾಳು ಪೂರೈಕೆ ಮೊದಲಾದ ಕೆಲವು ಕ್ರಮಗಳು ಸರಿಯಾದ ದಿಕ್ಕಿನಲ್ಲಿ ಇಟ್ಟ ಹೆಜ್ಜೆಗಳಾಗಿವೆ. ಸಬ್ಸಿಡಿಗಳನ್ನು ಕಡಿತ ಮಾಡುವ ಹಿಂದಿನ ಸರ್ಕಾರದ ದೋರಣೆಗಳನ್ನು ಕೈಬಿಟ್ಟು ಸಂಕಷ್ಟದಲ್ಲಿರುವ ಜನತೆಗೆ ಸಹಾಯ ಹಸ್ತ ನೀಡುವ ಧೋರಣೆಯತ್ತ ಸರ್ಕಾರ ವಾಲುತ್ತಿದೆ ಎಂಬ ಭಾವನೆ ಹುಟ್ಟುತ್ತದೆ.

ಆದರೆ ಸಿದ್ಧರಾಮಯ್ಯನವರ ಬಜೆಟ್ ಭಾಷಣದ ಆರಂಭದಲ್ಲಿ ವ್ಯಕ್ತವಾಗುವ ಈ ಆಶಾದಾಯಕ ಸೂಚನೆಗಳು, ಭಾಷಣ ಮುಂದುವರೆದಂತೆ ಕ್ರಮೇಣ ಕ್ಷೀಣಿಸುತ್ತಾ ಮಾಯವಾಗಿಬಿಡುತ್ತವೆ. ವಿಶ್ವಬ್ಯಾಂಕ್ ನಿರ್ದೇಶಿತ ಉದಾರೀಕರಣ, ಖಾಸಗೀಕರಣ ನೀತಿಗಳಿಂದ ದೂರ ಸರಿಯುವ ಬದಲು ಬಜೆಟ್ಟಿನ ಮೂಲ ಆಶಯ ಮತ್ತು ನೀಡಲಾದ ಒತ್ತು ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳ ಪರವಾಗಿಯೇ ವಾಲುತ್ತಿರುವುದು ಸ್ಪಷ್ಟವಾಗುತ್ತದೆ.

ವಿದ್ಯುತ್ ಕ್ಷೇತ್ರದ ಖಾಸಗೀಕರಣ

ವಿದ್ಯುತ್ ಕ್ಷೇತ್ರದ ಸುಧಾರಣೆಗಳ ಹೆಸರಿನಲ್ಲಿ ವಿದ್ಯುತ್ ರಂಗದ ಖಾಸಗೀಕರಣವನ್ನು ಸಮರ್ಥಿಸಲಾಗುತ್ತಿದೆ. ಈ ಉದ್ದೇಶಕ್ಕಾಗಿ ಎಲ್ಲಾ ಗ್ರಾಹಕರಿಗೂ ಮೀಟರ್ ಅಳವಡಿಸಲಾಗುವುದೆಂದು ಮತ್ತೆ ಒತ್ತಿ ಹೇಳಲಾಗಿದೆ.

ಪಂಪ್‌ಸೆಟ್ ರೈತರು ಮತ್ತು ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳು ಮೀಟರ್ ಅಳವಡಿಸುವುದನ್ನು ವಿರೋಧಿಸುತ್ತಿದ್ದಾರೆ. ತಮಗೆ ಉಚಿತವಾಗಿಯೇ ವಿದ್ಯುತ್ ನೀಡಬೇಕೆಂಬುದು ಅವರ ಬೇಡಿಕೆ ಅಲ್ಲ. ವಿದ್ಯುತ್ ದರಗಳು ತಮ್ಮ 'ಕೊಳ್ಳುವ ಸಾಮರ್ಥ್ಯ'ವನ್ನು ಮೀರಿರಬಾರದು. ಅಗ್ಗದ ದರಗಳಲ್ಲಿ ತಮಗೆ ವಿದ್ಯುತ್ ಪೂರೈಕೆ

ಸರ್ಕಾರ ಈ ವಿಷಯದಲ್ಲಿ ಕೈಹಾಕಬಾರುದು. ವಿದ್ಯುತ್ ರಂಗವನ್ನು ಇಡಿಯಾಗಿ ಖಾಸಗೀಕರಣ ಮಾಡಬೇಕು. ಅದರ ಅಂಗವಾಗಿ ಪ್ರತಿಯೊಬ್ಬ ಗ್ರಾಹಕನಿಗೂ ಮೀಟರ್ ಅಳವಡಿಸಬೇಕು. ವಿಶ್ವಬ್ಯಾಂಕಿನ ಈ ನಿರ್ದೇಶನಗಳಿಗೆ ಒಪ್ಪಿಗೆ ನೀಡಿ ಹಿಂದಿನ ಸರ್ಕಾರ ವಿಶ್ವ ಬ್ಯಾಂಕ್ ನಿಂದ ಸಾಲ ತಂದಿದೆ. ಹೊಸ ಸಮ್ಮಿಶ್ರ ಸರ್ಕಾರವೂ ಅದೇ ದಾರಿಯಲ್ಲಿ ಸಾಗುವ ಉದ್ದೇಶವನ್ನು ಈ ಬಜೆಟ್

ನಿತ್ಯಾನಂದ ಸ್ವಾಮಿ

ನಲ್ಲಿ ವ್ಯಕ್ತಪಡಿಸಿದೆ.

ಕೃಷಿ ವಲಯಕ್ಕೆ ಆಧ್ಯತೆ ಸಾಲದು:-

ಕೃಷಿ ವಲಯಕ್ಕೆ ಚೈತನ್ಯ ತುಂಬುವುದು ನನ್ನ ಸಂಕಲ್ಪವಾಗಿದೆ ಎಂದು ಹಣಕಾಸು ಮತೇರಿಗಳು ಹೇಳಿದ್ದಾರೆ. ಇದಕ್ಕಾಗಿ ರೈತರಿಗೆ ಸಾಲದ ಲಭ್ಯತೆ, ನೀರಾವರಿ ಸೌಕರ್ಯ, ತಂತ್ರಜ್ಞಾನದ ಮಾಹಿತಿ ಮತ್ತು ಮಾರುಕಟ್ಟೆ ಅವಕಾಶಗಳನ್ನು ವ್ಯಾಪಕವಾಗಿ ಕಲ್ಪಿಸಲಾಗುವುದು ಎಂದು ಹೇಳಿದ್ದಾರೆ. ಇನ್ನೂ ಮುಂದೆ ರೈತರ ಕೃಷಿ ಸಾಲಗಳಿಗೆ ಶೇ.6 ರ ದರದಲ್ಲಿ ಸಹಕಾರಿ ಬ್ಯಾಂಕ್ ಗಳ ಮೂಲಕ ಸಾಲ ಒದಗಿಸಲು 60 ಕೋಟಿ ರೂ. ಮೀಸಲಿಡುವುದಾಗಿ ಪ್ರಕಟಿಸಿದ್ದಾರೆ. 60 ಕೋಟಿ ರೂ. ಮೀಸಲಿಡುವುದಾಗಿ ಪ್ರಕಟಿಸಿದ್ದಾರೆ. 60 ಕೋಟಿ ಯಾವ ಮೂಲೆಗೆ? ಎಷ್ಟು ಜನ ರೈತರಿಗೆ ಸಹಕಾರಿ ಬ್ಯಾಂಕುಗಲ ಮೂಲಕ ಸಾಲ ದೊರೆಯಲು ಸಾಧ್ಯ? ಖಾಸಗೀ ಮೂಲಗಳಿಂದ ಸಾಲ ಪಡೆಯುತ್ತಿರುವ ರೈತರಿಗೆ ಎಲ್ಲಿ ರಕ್ಷಣೆ? ಅಲ್ಲಿಯ ದುಬಾರಿ ದಕ್ಷಗಳಿಗೆ ಎಲ್ಲಿದೆ ಕಡಿವಾಣ? ಇಂತಹ ಖಾಸಗಿ ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಪರಿಹಾರ ನೀಡುವ ಭರವಸೆಗಳಿಗೆ ಏನಾಯಿತು?

ತಾವು ಪಡೆದಿರುವ ಸಾಲದ ಅಸಲು ಮತ್ತು ಸಾಲದ ಮೇಲಿನ ಸರಳ ಬಡ್ಡಿಯ ಮೊತ್ತಕ್ಕೆ ಸಮಾನವಾದ ಮೊತ್ತವನ್ನು ಈಗಾಗಲೇ ಮರುಪಾವತಿ ಮಾಡಿರುವ ರೈತರ ಬಾಕಿ ಸಾಲವನ್ನು ಮನ್ನಾ ಮಾಡಲಾಗುವುದೆಂದು ಹೇಳಲಾಗಿದ್ದು ಅದಕ್ಕಾಗಿ 49 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಈ ಸೌಲಭ್ಯ ಪಡೆಯಲಿರುವ ರೈತರ ಸಂಖ್ಯೆ ಸುಮಾರು 20 ಸಾವಿರ. ಆದರೆ ಬಡ್ಡಿಯ ಕಂತುಗಳನ್ನು ಸಹ ಪಾವತಿ ಮಾಡಲು ಸಾಧ್ಯವಾಗದೆ ಸುಸ್ತಿ ಬಡ್ಡಿಯ ಹೊರೆಯ ಅಡ್ಡಿಯಲ್ಲಿ ಸಿಕ್ಕಿಹಾಕಿಕೊಂಡು ಸುಸ್ತಾದ ಸಣ್ಣ ರೈತರ ಗತಿಯೇನು? ಅಂತಹ ಸಣ್ಣ ರೈತರ ಎಲ್ಲಾ ಸಾಲವನ್ನು ಮನ್ನಾ ಮಾಡಿ ಅವರನ್ನು ಋಣಮುಕ್ತರಾಗಿಸಿದರೆ ಮಾತ್ರ ಸಾಲದ ಸಾವುಗಳನ್ನು ನಿಲ್ಲಿಸಬಹುದು. ಆದರೆ ವಿಶ್ವಬ್ಯಾಂಕ್ ಇದನ್ನು ಒಪ್ಪುವುದಿಲ್ಲವಲ್ಲ!

ಸತತವಾಗಿ ತಲೆದೋರಿದ ಬರಗಾಲದಿಂದಾಗಿ ಅತಿ ಹೆಚ್ಚು ಕಷ್ಟಕ್ಕೊಳಗಾದ ಜನ ನಮ್ಮ ಕೃಷಿ ಕೂಲಿಕಾರರು. ಉದ್ಯೋಗ ಹುಡುಕಿಕೊಂಡು ಎಷ್ಟೊಂದು ಸಂಖ್ಯೆಯಲ್ಲಿ ನಮ್ಮ ಜನ ವಲಸೆಹೋಗುತ್ತಾರೆ ಮತ್ತು ವಲಸೆ ಹೋದಲ್ಲಿ ಎಂತಹ ಅಮಾನವೀಯ ಬದುಕು ಬದುಕುತ್ತಿದ್ದಾರೆ

ಂಬುದು ಗೋವಾದ ಬೀನಾ ಬೀಚ್‌ನಲ್ಲಿ ತ್ತೀಚೆಗೆ ಅನಾವರಣಗೊಂಡಿತ್ತು. ಅವರ ಸರಿನಲ್ಲಿ ತರಿಸಿಕೊಳ್ಳಲಾದ 'ಕೂಲಿಗಾಗಿ ಕಾಳು' ಳಸಂತಗೆ ಹೋಗದೆ ಗ್ರಾಮೀಣ ಪ್ರದೇಶಗಳಿಗೆ ಲುಪುವಂತಾಗಿದ್ದರೆ ಗ್ರಾಮೀಣ ಕೂಲಿಕಾರರಿಗೆ ನವಾಸ ತಪ್ಪುತ್ತಿತ್ತು.

ಮೀಣ ಕೂಲಿಗಾರರಿಗೆ ಉದ್ಯೋಗ ದಗಿಸುವ ಯಾವುದೇ ಪ್ರಸ್ತಾಪ ಈ ಬಜೆಟ್

ಬಜೆಟ್

ಲ್ಲಿ ಕಾಣಸಿಗುವುದಿಲ್ಲ. ಅವರ ಬಾಗ್ಯಜ್ಯೋತಿ, ಟೀರ ಜ್ಯೋತಿ ಸಂಪರ್ಕಗಳಿಗೆ ಉಚಿತ ಅಥವ ಯಾಯ್ತಿ ದರಗಳಲ್ಲಿ ವಿದ್ಯುತ್ ಒದಗಿಸುವ ಪ್ರಸ್ತಾವವಿಲ್ಲ. ನಿರುದ್ಯೋಗಿ ಯುವಕರಿಗೆ 500 ರೂ.ಮಾಸಿಕ ಭತ್ಯೆ ನೀಡುವ ಚುನಾವಣಾ ಪೂರ್ವದ ಭರವಸೆಯ ಬಗ್ಗೆ ಚಕಾರ ಶಬ್ದವಿಲ್ಲ. ಇಂತಹ ಯಾವುದೇ ಉದ್ದೇಶಕ್ಕಾಗಿ ಹಣ ನೀಡುವುದು ವಿಶ್ವಬ್ಯಾಂಕ್ ಪ್ರಕಾರ 'ಅನುತ್ಪಾದಕ' ವಾಗಿರುತ್ತದೆ.


ನೇಕಾರರಿಗೆ ನಿರಾಸೆ: ರ್ನಾಟಕದಲ್ಲಿ ಸುಮಾರು 80 ಸಾವಿರ ನೇಕಾರ ಕುಟುಂಬಗಳಿವೆ ಎಂದು ಬಜೆಟ್ ನಲ್ಲಿ ಪ್ರಸ್ತಾಪಿಸಲಾಗಿದೆ. ಇವರಿಗೆ ಅನುಕೂಲ ಕಲ್ಪಿಸಲು 20 ಕೋಟಿ ರೂಗಳ ಪ್ಯಾಕೇಜನ್ನು ಪ್ರಸ್ತಾಪಿಸಲಾಗಿದೆ. ನೇಕಾರರ ಸಂಖ್ಯೆ ಸರ್ಕಾರದ ಅಂದಾಜಿಗಿಂತಲೂ ಹೆಚ್ಚಿದೆ. ಸರ್ಕಾರದ ಸಂಖ್ಯೆಯನ್ನೇ ತೆಗೆದುಕೊಂಡರೆ, 20 ಕೋಟಿಯಲ್ಲಿ ಒಂದು ಕುಟುಂಬಕ್ಕೆ ಈ ಒಂದು ವರ್ಷಕ್ಕೆ 2500 ರೂ. ಒದಗಿಸಿದಂತಾಗುತ್ತದೆ. ಆತ್ಮಹತ್ಯೆಯ ದಾರಿ ಹಿಡಿದಿರುವ ಈ ಜನರನ್ನು ಬದುಕಿಸುವ ನಿಜವಾದ ಕಾಳಜಿ ಸರ್ಕಾರಕ್ಕೆ ಇದೆಯೇ? ತಿಂಗಳುಗಟ್ಟಲೆ ಉದ್ಯೋಗವಿಲ್ಲದೆ ಬೀದಿಪಾಲಾದ ಈ ವಿಭಾಗದ ಜನರ ತೀವ್ರ ಹಾಹಾಕಾರದ ಹಿನ್ನೆಲೆಯಲ್ಲಿ ಹಿಂದಿನ ಸರ್ಕಾರ 105 ಕೋಟಿ ರೂ.ಪ್ಯಾಕೇಜ್ ಪ್ರಕಟಿಸಿತ್ತು. ಅದು ಕೇವಲ ಚುನಾವಣೆಯ ಭರವಸೆಯಾಗಿ ಮಾಯವಾಯಿತು. ಹೊಸ ಸರ್ಕಾರ ಕೇವಲ 20 ಕೋಟಿ ರೂ.ಗಳನ್ನು ನೀಡುವ ಮೂಲಕ ನೇಕಾರರನ್ನು ಮುಖ್ಯವಾಗಿ ಕೈಮಗ್ಗದ ನೇಕಾರರ ಸಂರಕ್ಷಣೆಗಾಗಿ ಸ್ಥಾಪನೆಯಾದ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಆರ್ಥಿಕವಾಗಿ ಪುನಶ್ಚೇತನಗೊಳಿಸಲು ಕನಿಷ್ಠ 75 ಕೋಟಿ ರೂ.ಗಳ ಅಗತ್ಯವಿದ್ದು ಅದನ್ನು ಭಾಗಭಾಗವಾಗಿ ಕೊಟ್ಟರೆ ಪ್ರಯೋಜನವಾಗದು.

ಶಿಕ್ಷಣಕ್ಕೆ ಕಡಿತ: ಶಿಕ್ಷಣ ವಲಯಕ್ಕೆ 860 ಕೋಟಿ ರೂ. ಒದಗಿಸಲಾಗಿದೆ ಎಂದು ಹೇಳಲಾಗಿದೆ. ಇದರಲ್ಲಿ 262 ಕೋಟಿ ರೂ.ಗಳನ್ನು 7ನೇ ತರಗತಿ ವರೆಗಿನ ಶಾಲಾಮಕ್ಕಳ ಬಿಸಿಯೂಟಕ್ಕೆ ತೆಗೆದಿಡಲಾಗಿದೆ. ಇದು ಕಳೆದ ವರ್ಷಕ್ಕಿಂತ ಗಣನೀಯವಾಗಿ ಹೆಚ್ಚು ಎಂದು ಹೇಳಿಕೊಳ್ಳಲಾಗುತ್ತಿದೆ. ಬಿಸಿಯೂಟಕ್ಕೆ ಕೇಂದ್ರದಿಂದ ದೊರೆಯುವ ಸಹಾಯವನ್ನು ಮರೆ ಮಾಚಲಾಗಿದೆ. ಶಿಕ್ಷಣಕ್ಕೆ ವರ್ಷದಿಂದ ವರ್ಷಕ್ಕೆ ಹಣ ನೀಡಿಕೆಯನ್ನು ಇಳಿಸುವ ಹಿಂದಿನ ಸರ್ಕಾರದ ನೀತಿಯನ್ನೇ ಮತ್ತೆ ಮುಂದುವರೆಸಲಾಗಿದೆ. 2003-04 ರಲ್ಲಿ ಶಿಕ್ಷಣ ವಲಯಕ್ಕೆ ಶೇ 14 ರಷ್ಟು ಹಣವನ್ನು ಒದಗಿಸಿದ್ದರೆ ಈಗ ಅದನ್ನು ಶೇ 13 ಕ್ಕೆ ಇಳಿಸಲು ಪ್ರಸ್ತಾಪಿಸಲಾಗಿದೆ. ಇದರಿಂದಾಗಿ ಶಿಕ್ಷಣ ಇನ್ನೂ ದುಬಾರಿಯಾಗಲಿದೆ.

ಸಿಇಟಿ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಸರ್ಕಾರ ವಿಫಲವಾಗಿದ್ದು ಒಂದು ಕಡೆಯಾದರೆ ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಶುಲ್ಕವನ್ನು ಭರಿಸಲು ಸರ್ಕಾರ ಹಣ ಒದಗಿಸುವ ಮೂಲಕ ವಿದ್ಯಾರ್ಥಿಗಳ ಪೋಷಕರ ನೆರವಿಗೆ ಬರಬಹುದಿತ್ತು. ಬಜೆಟ್‌ನಲ್ಲಿ ಈ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಖಾಲಿ ಇರುವ ಶಿಕ್ಷಕರ ಹಾಗೂ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ, ಶಾಲಾ ಕಾಲೇಜುಗಳಿಗೆ ಕಟ್ಟಡಗಳನ್ನು ಒದಗಿಸುವ ಕುರಿತು ಯಾವುದೇ ಪ್ರಸ್ತಾಪವಿಲ್ಲ.


ಸಂಪನ್ಮೂಲ ಸಂಗ್ರಹ ಎಲ್ಲಿಂದ?

ಸಿದ್ದರಾಮಯ್ಯನವರು ತೆರಿಗೆಯ



ಮೂಲಗಳಿಂದ ಸುಮಾರು 2000 ಕೋಟಿ ರೂ. ಅಧಿಕ ಆದಾಯವನ್ನು ನಿರೀಕ್ಷಿಸಿದ್ದಾರೆ. ಈ ನಿರೀಕ್ಷೆ ನಿಜವಾಗಬಹುದೇ ಎಂದು ಕಾದು ನೋಡಬೇಕು. ಆನ್‌ಲೈನ್ ಲಾಟರಿ ನಿಷೇಧದಿಂದ ಸುಮಾರು 300 ಕೋಟಿ ರೂ.ಗಳ ಆದಾಯ ಖೋತಾ ಆಗಲಿದೆ. ಅದೊಂದು ಸಾಮಾಜಿಕ ಪಿಡುಗು. ಅದನ್ನು ನಿಷೇಧಿಸಿರುವುದು ಸ್ವಾಗತಾರ್ಹ. ಸಾರಾಯಿ ಮಾರಾಟದಲ್ಲಿ ಆಗುತ್ತಿರುವ ತೆರಿಗೆ ವಂಚನೆಯನ್ನು ತಡೆಯಲು ಕ್ರಮ ಕೈಗೊಳ್ಳುವ ಮೂಲಕ ತೆರಿಗೆ ಸಂಗ್ರಹಣೆಯ ಸುಧಾರಣೆಗೆ ನಿರ್ಧರಿಸಿರುವುದು ಸ್ವಾಗತಾರ್ಹವಾಗಿದೆ.

ಆದರೆ ವಿಶ್ವಬ್ಯಾಂಕ್ ನಿರ್ದೇಶನಕ್ಕೆ ಅನುಗುಣವಾಗಿ ಸರ್ಕಾರದ ವೆಚ್ಚಗಳನ್ನು ಕಡಿಮೆ ಮಾಡುವ ಹೆಸರಿನಲ್ಲಿ ಸರ್ಕಾರಿ ಸಿಬ್ಬಂದಿ ಸಂಖ್ಯೆಯ ಸರಿಗಾತ್ರ ಮಾಡುವುದು, ಪಿಂಚಣಿ ಮೊದಲಾದ ಸೌಕರ್ಯಗಳನ್ನು ಕಡಿಮೆ ಮಾಡುವುದು, ಸಿಬ್ಬಂದಿ ಭರ್ತಿ ರದ್ದತಿ ಮುಂದುವರೆಸುವುದು ಮೊದಲಾದ ಪ್ರಸ್ತಾವಗಳು ಆಕ್ಷೇಪಾರ್ಹವಾಗಿವೆ. ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆಯಂತಹ ಇಲಾಖೆಗಳಲ್ಲಿ ಅಗತ್ಯ ಇರಲೇಬೇಕಾಗುತ್ತದೆ. ಅಲ್ಲದೆ ಸರ್ಕಾರ ಜನತೆಗೆ ಒದಗಿಸಬೇಕಾದ ಸೇವೆಗಳನ್ನು ಕಡಿತ ಮಾಡಿ ಅಥವಾ ಸರ್ಕಾರಿ ನೌಕರರಿಗೆ ನ್ಯಾಯವಾಗಿ ದೊರೆಯಬೇಕಾದ ಸೌಲಭ್ಯಗಳನ್ನು ಕಡಿತ ಮಾಡಿ ಸಂಪನ್ಮೂಲಗಳನ್ನು ಸಂಗ್ರಹ ಮಾಡುವ ಆಲೋಚನೆ ಆರೋಗ್ಯಕರವಾದುದಲ್ಲ. ಇದು ಸ್ಪಷ್ಟವಾಗಿ ವಿದೇಶಿ ಹಣಕಾಸು ಬಂಡವಾಳದ ಏಜೆಂಟ್ ಆಗಿರುವ ವಿಶ್ವಬ್ಯಾಂಕ್ ಯೋಚನೆಯಾಗಿದೆ. ಬಜೆಟ್‌ನ ಈ ಅಪಾಯವನ್ನು ಬಯಲಿಗೆಳೆದು ಸರ್ಕಾರ ತನ್ನ ಧೋರಣೆಯನ್ನು ಬದಲಾಯಿಸುವಂತೆ ಒತ್ತಾಯ ತರುವುದು ತುರ್ತಾಗಿ ಆಗಬೇಕಾಗಿದೆ.



ಕೇಂದ್ರ ಬಜೆಟ್

ಕೃಷಿ ಸಾಲಕ್ಕೆ ಅಡೆತಡೆಗಳು

ಕೇಂದ್ರ ಸರ್ಕಾರದ 2004-05ನೇ ಸಾಲಿನ ಬಜೆಟ್‌ನಲ್ಲಿ ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಎನ್‌ಡಿಎ ಸರ್ಕಾರದ ಆಡಳಿತದಿಂದಾಗಿ ಅಪಾರ ನೋವು ಅನುಭವಿಸಿದ ರೈತ ಸಮುದಾಯ ಆ ಸರ್ಕಾರವನ್ನು ತಿರಸ್ಕರಿಸಿದ್ದರಿಂದ ಅಧಿಕಾರಕ್ಕೆ ಬಂದ ಈ ಸರ್ಕಾರ ಇಂತಹ ಒತ್ತನ್ನು ಕೃಷಿಗೆ ನೀಡುವುದು ಅನಿವಾರ್ಯವಾಗಿತ್ತು. ಜೊತೆಗೆ ಸಿಪಿಐ(ಎಂ) ನೇತೃತ್ವದಲ್ಲಿ ಎಡ ಪಕ್ಷಗಳು ಈ ಸರ್ಕಾರದ ಆತ್ಮಸಾಕ್ಷಿಯಂತೆ ಕೆಲಸ ಮಾಡುತ್ತಿರುವಾಗ ಚಿದಂಬರಂ ಅವರಿಗೆ ಬೇರೆ ದಾರಿ ಇರಲೇ ಇಲ್ಲ. ಆದ್ದರಿಂದಲೇ ಬಜೆಟ್ಟಿನಲ್ಲಿ ಮೂರು ವರ್ಷಗಳ ಅವಧಿಯಲ್ಲಿ ಕೃಷಿಗೆ ಸಾಲವನ್ನು ದ್ವಿಗುಣಗೊಳಿಸುವ ಮಾತು ಬಂದಿರುವುದು.

ಬಜೆಟ್ಟಿನ ಈ ಮಾತನ್ನು ಕೃತಿಗೆ ಇಳಿಸುವುದು ಸುಲಭವಲ್ಲ. ಉದಾರೀಕರಣ/ ಜಾಗತೀಕರಣಗಳ ಕ್ರಮಗಳು ಹೆಚ್ಚಿನ ಪ್ರಮಾಣದಲ್ಲಿ 1991-92 ರಿಂದ ಬರತೊಡಗಿದ ನಂತರ ದೇಶದ ಬೆನ್ನೆಲುಬಾದ ಕೃಷಿ ವಲಯಕ್ಕೆ ಹಲವು ತರಹದ ಮೋಸಗಳಾಗುತ್ತಿವೆ. ಕೃಷಿ ಸಾಲದ ವಿಷಯದಲ್ಲೂ ಇದು ದೊಡ್ಡ ಪ್ರಮಾಣದಲ್ಲಿಯೇ ಆಗಿದೆ. ಬ್ಯಾಂಕು ಮತ್ತು ಕೃಷಿ ಸಾಲ ನೀಡುವ ಸರ್ಕಾರಿ ಸಂಸ್ಥೆಗಳ ವಿಷಯದಲ್ಲಿ ಆಗಿರುವ ಬಹುಮುಖ್ಯ ಪ್ರತಿಗಾಮಿ ಬದಲಾವಣೆ ಇದು. ಇವು ಜನಸೇವೆ, ದೇಶಸೇವೆಯ ದಾರಿಯಿಂದ ಲಾಭದ ದಾರಿಗೆ ಬದಲಾಗಿರುವುದು. ಬೇರೆ ಮಾತುಗಳಲ್ಲಿ ಹೇಳವುದಾದರೆ ಹಿಂದೆ ಸಾಮಾಜಿಕ ಗುರಿ ಮುಖ್ಯವಾಗಿತ್ತು. ಇಂದು ಲಾಭವೇ ಮುಖ್ಯವಾಗಿ ಹೋಗಿದೆ.

ಲಾಭವೇ ಮುಖ್ಯವಾದರೆ ಕೃಷಿಗೆ ಸಾಲ ಕೊಡಬೇಕೇ ಬೇಡವೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಭಾರತದ ಕೃಷಿ ಲಾಭದಾಯಕವಲ್ಲ ಮತ್ತು ಕೃಷಿ ಅವಲಂಬಿಸಿರುವ ಬಹುತೇಕ ಜನ ಬಡವರು ಎಂಬುದು ವಾಸ್ತವ.

ಈ ಕಾರಣದಿಂದಾಗಿಯೇ ಬ್ಯಾಂಕುಗಳು ಕೃಷಿ ಸಾಲದಿಂದ ವಿಮುಖವಾಗಿಬಿಟ್ಟಿವೆ. ಅದರಲ್ಲೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಹಲವು ಬೇರೆ ತರಹದ ಸಮಸ್ಯೆಗಳೂ ಇವೆ. ಹೊಸಬರನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದನ್ನು ಕಡಿತಗೊಳಿಸಿರುವುದರಿಂದ ಎಳೆಪ್ರಾಯದ ಬ್ಯಾಂಕ್ ನೌಕರರು ಹೆಚ್ಚಿನ ಸಂಖ್ಯೆಯಲ್ಲಿಲ್ಲ. ಕೃಷಿ ಸಾಲ ನೀಡಲು ಹಳ್ಳಿ ಪ್ರದೇಶಗಳಲ್ಲಿ ಓಡಾಡಬೇಕು. ಇದಕ್ಕೆ ಯುವ ನೌಕರರೇ ಆಗಬೇಕು. ಹಳ್ಳಿಗಳಲ್ಲೇ ವಸತಿ ಹೊಂದಿ ಕೆಲಸ ಮಾಡಬಲ್ಲಂತವರಾದರೆ ಜನರ ಕಷ್ಟಸುಖಗಳನ್ನು ಹೆಚ್ಚಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಒಂದು ಅಂದಾಜಿನ ಪ್ರಕಾರ ರಾಷ್ಟ್ರೀಕೃತ ಬ್ಯಾಂಕುಗಳ ನೌಕರರ ಇಂದಿನ ಸರಾಸರಿ ವಯಸ್ಸು ನಲವತ್ತಕ್ಕೂ ಹೆಚ್ಚು. ಈ ನೌಕರರು ಮಕ್ಕಳ ವಿದ್ಯಾಭ್ಯಾಸ ಮತ್ತು ಇತರ ಅನುಕೂಲಗಳಿಗಾಗಿ ಪಟ್ಟಣ ಸೇರಬಯಸುತ್ತಾರೆ. ಇಂತಹವರಿಂದ ಕೃಷಿ ಸಾಲ ಬೆಳೆಯುವ ಸಾಧ್ಯತೆ ಕಡಿಮೆ.

ಇದಲ್ಲದೆ ಗ್ರಾಮೀಣ ಬ್ಯಾಂಕುಗಳನ್ನು ಹೆಚ್ಚು ಪ್ರಮಾಣದಲ್ಲಿ ವಾಣಿಜ್ಯೀಕರಿಸಲಾಗಿದೆ. ಅಲ್ಲೂ ಲಾಭವೇ ಮುಖ್ಯವಾಗಿರುವುದರಿಂದ ಕೃಷಿಗೆ ಮೊದಲಿನ ಒತ್ತು ಇಲ್ಲ.

ಕೃಷಿಯಲ್ಲೂ ವಾಣಿಜ್ಯೀಕೃತ ಚಟುವಟಿಕೆಗಳಿಗೆ ವಾಣಿಜ್ಯ ಬೆಳೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ವಿಶ್ವವ್ಯಾಪಾರ ಸಂಘಟನೆಯ ಒಪ್ಪಂದದ ಪರಿಣಾಮವಾಗಿ ಮತ್ತು ಜಾಗತೀಕರಣದಿಂದಾಗಿ, ಬೆಲೆಗಳು ಏರುಪೇರಾಗುತ್ತಲೇ ಇವೆ. ಉದಾಹರಣೆಗೆ ಕಾಫಿ, ಕಬ್ಬು, ಸಾಂಬಾರ ಬೆಳೆಗಳು ಇತ್ಯಾದಿಗಳ ಬೆಲೆಗಳು ಕುಸಿದಿವೆ. ಲಾಭವೇ ಮುಖ್ಯ ಗುರಿಯಾಗಿರುವಾಗ ಈ ಬೆಳೆಗಳಿಗೆ ಸಾಲ ನೀಡಲು ಬ್ಯಾಂಕುಗಳು ಹೇಗೆ ಮುಂದೆ ಬಂದಾವು? ಕೃಷಿ ನೀರಾವರಿ ಯಾಂತ್ರೀಕರಣ ಇತ್ಯಾದಿಗಳಿಗೂ ಹೆಚ್ಚಿನ ಆದ್ಯತೆ ನೀಡಿಲ್ಲದೆ ಇರುವುದರಿಂದ ಸಾಲ ನೀಡುವ ಸಂಸ್ಥೆಗಳು ಹಿಂದೆ ಮುಂದೆ ನೋಡುತ್ತಿವೆ.

ಈಗ ಬಜೆಟ್ಟಿನಲ್ಲಿ ಇಂತಹ ಒಂದು ಒತ್ತನ್ನು ನೀಡಿ ಒತ್ತಡ ಹೇರುವುದರಿಂದ ನಿಯಮಿತವಾಗಿ ಸಮಗ್ರವಾಗಿ ಇದನ್ನು ಸಾಧಿಸುವ ಬದಲು ಚೂರುಪಾರು ಕ್ರಮಗಳಿಂದ ಪರೋಕ್ಷ ಕ್ರಮಗಳಿಂದ ಗುರಿ ಸಾಧಿಸಹೊರಟರೆ ಅದರಿಂದ ರೈತರ ಸಮಸ್ಯೆಗಳು ಪರಿಹಾರವಾಗುವುದಿಲ್ಲ.

ಕೇಂದ್ರದ ಯುಪಿಎ ಸರ್ಕಾರ ತುಂಬು ಮನಸ್ಸಿನಿಂದ ಇತ್ತ ಗಮನ ಹರಿಸಬಲ್ಲುದೆ ಎಂಬುದೇ ಪ್ರಶ್ನೆ.

ಆರ್ಥಿಕ ಸಮೀಕ್ಷೆ :

ಸರ್ಕಾರದ ಆತ್ಮದ್ರೋಹ?

ಬಜೆಟ್ ಮಂಡನೆಯ ಪೂರ್ವಭಾವಿಯಾಗಿ ಆರ್ಥಿಕ ಸಮೀಕ್ಷೆಯನ್ನು ಸಂಸತ್ತಿನಲ್ಲಿ ಮಂಡಿಸಲಾಗುತ್ತದೆ. ಇದು ದೇಶದ ಆರ್ಥಿಕ ಯಾವ ಸ್ಥಿತಿಯಲ್ಲಿದೆ, ಮುಂದೆ ಎಂತಹ ಕ್ರಮಗಳು ಬೇಕು ಎಂಬ ಬಗ್ಗೆ ಈ ಸಮೀಕ್ಷೆಯಲ್ಲಿ ವಿವರಗಳಿರುತ್ತವೆ.

ಈ ಸಾರಿಯ ಆರ್ಥಿಕ ಸಮೀಕ್ಷೆ ಆರ್ಥಿಕದ ಬಗ್ಗೆ ಬಹಳ ಒಳ್ಳೆಯ ಮಾತುಗಳನ್ನಾಡಿದೆ. ಬಹಳ ಜನ ಇದರ ಬಗ್ಗೆ ಹೆಚ್ಚು ಗಮನ ನೀಡಿಲ್ಲ. ಯುಪಿಎ ಸರ್ಕಾರ ತನ್ನನ್ನು ಅಧಿಕಾರಕ್ಕೆ ತಂದ ಜನ ಎಂತಹ ನೋವು ಅನುಭವಿಸಿದ್ದರು. ಅವರ ಸಮಸ್ಯೆಗಳೇನು ಎಂಬುದರತ್ತ ಗಮನ ನೀಡುವಂತಿಲ್ಲ ಬದಲಿಗೆ ಎನ್‌ಡಿಎ ಸರ್ಕಾರ ಚುನಾವಣೆಯ ಮೊದಲು ನಡೆಸಿದ "ಭಾರತ ಪ್ರಕಾಶಿಸುತ್ತಿದೆ" 'ಹಿತಾನುಭವವಿದೆ' ಎಂಬ ಪ್ರಚಾರದ ಸುಳಿಯಲ್ಲೇ ಸಿಲುಕಿರುವಂತಿದೆ. ಆದ್ದರಿಂದಲೇ ಸಮೀಕ್ಷೆ ಆರ್ಥಿಕವನ್ನು ಹೊಗಳಿರುವಂತಿದೆ ಉದಾಹರಣೆಗೆ ಆರ್ಥಿಕ ಸಮೀಕ್ಷೆಯ ಮುಖ್ಯ ಅಂಶಗಳನ್ನು ನೋಡಿ.

- ಆರ್ಥಿಕ ಹೂಡಿಕೆಗೆ ಒಳ್ಳೆಯ ವಾತಾವರಣ ಹೊಂದಿವೆ.
- ಮುಂಬರುವ ಐದು ವರ್ಷಗಳಲ್ಲಿ ಶೇ7-8ರ ಬೆಳವಣಿಗೆ ದರ ಸಾಧ್ಯ.
- ಅಂತರ್ರಚನಾ ಸೌಕರ್ಯಗಳಲ್ಲಿ ಖಾಸಗಿ ಹೂಡಿಕೆ ಬೇಕು.
- ಹಣದುಬ್ಬರ ಶೇ.5ರ ಆಸುಪಾಸಿನಲ್ಲೇ ಇರಲಿದೆ ಇತ್ಯಾದಿ.

ಮೇಲಿನ ಅಂಕಿ ಅಂಶಗಳಲ್ಲಿ ತಪ್ಪಿರಲಿಕ್ಕಿಲ್ಲ, ಆದರೆ ಧೋರಣೆಯಲ್ಲಂತೂ ಹಿಂದಿನ ಸರ್ಕಾರ ಜನರಿಗೆ ಮಾಡಿರುವ ಅನ್ಯಾಯದ ಅರಿವಿರುವಂತಿಲ್ಲ.

ಉದಾಹರಣೆಗೆ ವಿವಿಧ ದೇಶಿ ಉದ್ದಿಮೆಗಳು ಎಂತಹ ತೊಂದರೆ ಅನುಭವಿಸುತ್ತಿವೆ. ಅವುಗಳಲ್ಲಿನ ಕಾರ್ಮಿಕರು ಎಂತಹ ಡೋಲಾಯಮಾನವಾದ ಬದುಕನ್ನು ಬದುಕುತ್ತಿದ್ದಾರೆ ದೇಶದಾದ್ಯಂತ ರೈತರುಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರ ಹಿನ್ನೆಲೆಯೇನು ಅದಕ್ಕೆ ಪರಿಹಾರಗಳೇನು, ದೇಶದಲ್ಲಿ ಬಡವ , ಶ್ರೀಮಂತರ ನಡುವಿನ ಅಂತರ ಹೇಗೆ ಹೆಚ್ಚಾಗುತ್ತಿದೆ ಎಂಬಿತ್ಯಾದಿ ಜ್ವಲಂತ ಸಮಸ್ಯೆಗಳನ್ನು ಪ್ರಸ್ತಾಪಿಸುವ ಮತ್ತು ವಿಶ್ಲೇಷಿಸುವ ಗೋಜಿಗೆ ಅದು ಹೋಗಿಲ್ಲ. ಆರ್ಥಿಕ ಸಮೀಕ್ಷೆಯಲ್ಲಿ ಈ ಅಂಶಗಳ ಬಗ್ಗೆ ಗಮನವಿರದಿದ್ದರೆ ಬಜೆಟ್ಟಿನಲ್ಲಿ ಯಾವ ಕ್ರಮಗಳಿರಲು ಸಾಧ್ಯ?

ಆರ್ಥಿಕದಲ್ಲಿ ಎಲ್ಲವೂ ಸರಿಯಾಗಿದ್ದರೆ ಎನ್‌ಡಿಎ ಸರ್ಕಾರವೇ ಅಧಿಕಾರದಲ್ಲಿ ಮುಂದುವರಿಯಬೇಕಾಗಿತ್ತಲ್ಲವೆ?

■ ಜಿ.ಎಸ್. ಮಣಿ

ಹದಗೆಡುತ್ತಿರುವ ಪ್ರವಾಹ ಪರಿಸ್ಥಿತಿ

ಈ ವರ್ಷದ ಮಳೆಗಾಲದಲ್ಲಿ ಮತ್ತೆ ಪ್ರವಾಹ ಪರಿಸ್ಥಿತಿ ಹಲವು ರಾಜ್ಯಗಳನ್ನು ತಟ್ಟಿದೆ. ಅಸ್ಸಾಂ, ಬಿಹಾರ, ಅರುಣಾಚಲ ಪ್ರದೇಶ ಈ ಬಾರಿ ಅತ್ಯಂತ ಭೀಕರ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದೆ. ಉತ್ತರ ಬಂಗಾಳ, ಕೇರಳ, ಕರ್ನಾಟಕದ ಭಾಗಗಳನ್ನು ಇದು ತಟ್ಟಿದೆ.

ಅಸ್ಸಾಂನಲ್ಲಿನ ಪ್ರವಾಹ ಪರಿಸ್ಥಿತಿ ಈಗಲೂ ಬಹಳ ಗಂಭೀರವಾಗಿದ್ದು, ಅದು ಇನ್ನಷ್ಟು ಹದಗೆಡುತ್ತಿದೆ. ಒಂದು ಕೋಟಿಗೂ ಹೆಚ್ಚು ಜನ ಪ್ರವಾಹ, ಭೂ ಸವೆತಗಳಿಂದ ಕಂಗಾಲಾಗಿದ್ದಾರೆ. ಅಧಿಕೃತ ಬುಲೆಟಿನ್ ಪ್ರಕಾರವೂ ರಾಜ್ಯದ 26 ಜಿಲ್ಲೆಗಳಲ್ಲಿ 90 ಲಕ್ಷ ಜನರನ್ನು ಇದು ತಟ್ಟಿದೆ. ಸತ್ತವರ ಸಂಖ್ಯೆ 608 ಕ್ಕೇರಿದೆ. ರಾಜಧಾನಿ ಗುವಾಹಟಿಯಲ್ಲೇ ಭಾರೀ ಮಳೆ ಮತ್ತು ಕೃತಕ ಪ್ರವಾಹದ ಭೂಕುಸಿತದಿಂದಾಗಿ 15 ಜನ ಸತ್ತಿದ್ದಾರೆ. ಲಕ್ಷಾಂತರ ಜನ ನಿರ್ವಸಿತರಾಗಿದ್ದಾರೆ. 21 ಲಕ್ಷ ಹೆಕ್ಟೇರ್ ಭೂಮಿ ನೀರಿನಿಂದ ಆವೃತ್ತವಾಗಿದೆ. ಅದರಲ್ಲಿ 6 ಲಕ್ಷ ಹೆಕ್ಟೇರ್ ಬೆಳೆ ಭೂಮಿ ಪ್ರವಾಹದಲ್ಲಿ ರಾಷ್ಟ್ರೀಯ ಮಾರ್ಗಗಳು, ಸೇತುವೆಗಳು, ಒಡ್ಡುಗಳು, ಅಡ್ಡಗಟ್ಟುಗಳು ಹಲವಾರು ಕೊಚ್ಚಿಕೊಂಡು ಹೋಗಿವೆ.

ಬಿಹಾರದಲ್ಲೂ ಇಂತಹ ಪರಿಸ್ಥಿತಿಯೇ ಇದೆ

ಉತ್ತರ ಬಿಹಾರದಲ್ಲಿ ಒಂದು ಕೋಟಿಗೂ ಹೆಚ್ಚು ಜನಗಳನ್ನು ಇದು ತಟ್ಟಿದೆ. ಇಡೀ ಉತ್ತರ ಬಿಹಾರದ ಜಿಲ್ಲೆಗಳು ಜಲಾವೃತ್ತವಾಗಿವೆ. ಸತ್ತವರ ಸಂಖ್ಯೆ 100 ನ್ನು ದಾಟಿವೆ. ಕೇವಲ ಸಮಸ್ತಿಪುರವೊಂದರಲ್ಲೇ 25 ಜನ ಸತ್ತಿದ್ದಾರೆ. ಜೀವನಾವಶ್ಯಕ ವಸ್ತುಗಳ ಬೆಲೆಗಳೇರುತ್ತಿವೆ. ಸಾವಿರಾರು ಜಾನುವಾರುಗಳು ಪ್ರವಾಹದಲ್ಲಿ ಪ್ರಾಣ ಕಳಕೊಂಡಿವೆ.

ಅರುಣಾಚಲ ಪ್ರದೇಶದಲ್ಲಿ ಎರಡನೇ ಪ್ರವಾಹದ ಅಲೆಗಳು ಒಂದು ಲಕ್ಷಕ್ಕೂ ಹೆಚ್ಚು ಜನಗಳನ್ನು ತಟ್ಟಿ ಪರಿಸ್ಥಿತಿ ಹದಗೆಡುತ್ತಿದೆ. ಹಲವು ಜಿಲ್ಲೆಗಳು ನೀರಿನಲ್ಲಿವೆ.

ಈಶಾನ್ಯ ರಾಜ್ಯಗಳಲ್ಲಿ ಮತ್ತು ಬಿಹಾರದಲ್ಲಿ ಲಕ್ಷಾಂತರ ಜನ ಪರಿಹಾರ ಕ್ಯಾಂಪುಗಳಲ್ಲಿ, ತಾತ್ಕಾಲಿಕ ಆಶ್ರಯ ಸ್ಥಾನಗಳಲ್ಲಿ ಹಾಗೂ ಜಲಾವೃತ್ತ ಪ್ರದೇಶಗಳಲ್ಲಿ ಹಸಿವು, ನೀರಿನಿಂದ ಬರುವ ಕಾಯಿಲೆಗಳನ್ನು ಎದುರಿಸುತ್ತಿದ್ದಾರೆ. ಸಾವಿರ-ಸಾವಿರ ಜನ ಪರಿಹಾರ ಕೇಂದ್ರಗಳಲ್ಲಿ ಅಥವಾ ತಲುಪಲಾರದ ಪ್ರದೇಶಗಳಲ್ಲಿ ಆಹಾರ, ಔಷಧಿ, ಸುರಕ್ಷಿತ ಕುಡಿಯುವ ನೀರು, ಮಕ್ಕಳ ಆಹಾರ, ಜಾನುವಾರುಗಳಿಗೆ ಮೇವು ಇಲ್ಲದೆ ನರಳುತ್ತಿದ್ದಾರೆ. ಪ್ರವಾಹಗ್ರಸ್ತ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳ ಬೆದರಿಕೆಯಿದೆ. ಜತೆಗೆ ವ್ಯಾಪಾರಿಗಳು ದುರಾಸೆಯಿಂದ ಸೃಷ್ಟಿಸಿರುವ ಅಭಾವದಿಂದಾಗಿ ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳು ಏರುತ್ತಿವೆ.

ಈ ಮೂರು ರಾಜ್ಯಗಳಲ್ಲಿ ಪರಿಹಾರ ಮತ್ತು ರಕ್ಷಣಾ ಕಾರ್ಯಗಳು ಅತ್ಯಂತ ಅಸಮರ್ಪಕವಾಗಿವೆ. ಕೇಂದ್ರ ಸರ್ಕಾರ ರಾಷ್ಟ್ರೀಯ ಪ್ರಕೋಪ ಪರಿಹಾರ ನಿಧಿಯಿಂದ ಸ್ವಲ್ಪ ಪರಿಹಾರವನ್ನು ಪ್ರಕಟಿಸಿದೆ. ಆದರೆ ಇದು ಕೂಡಾ ಸಮಸ್ಯೆಯ ಅಗಾಧತೆಯೆದುರು ಏನೇನೂ ಸಾಲದು.

ನೈಸರ್ಗಿಕ ಪ್ರಕೋಪಗಳಿಂದಾಗಿ ನಷ್ಟ ದಶಕದಿಂದ ದಶಕಕ್ಕೆ ಏರುತ್ತಾ ಬರುತ್ತಿದೆ. ಮತ್ತೆ-ಮತ್ತೆ ಬರುತ್ತಿರುವ ಪ್ರವಾಹಗಳು ದೇಶದ ಹಲವು ಭಾಗಗಳಲ್ಲಿ, ವಿಶೇಷವಾಗಿ ಈಶಾನ್ಯ ಭಾಗದಲ್ಲಿ ಗಂಭೀರ ಪರಿಸರ ವ್ಯತ್ಯಾಸಗಳನ್ನು ಉಂಟು ಮಾಡುತ್ತಿವೆ. ಮಣ್ಣಿನ ಸವೆತ ಆತಂಕಕಾರಿ



ಮಟ್ಟ ತಲುಪುತ್ತಿದೆ. ವ್ಯಾಪಕ ಪ್ರಮಾಣದಲ್ಲಿ ಭೂಮಿ ಸಾಗುವಳಿಗೆ ಅಯೋಗ್ಯವಾಗುತ್ತಿದೆ. ಪ್ರತಿಯೊಂದು ಪ್ರವಾಹ ಅಥವಾ ಬರ ಪರಿಸರದ ಮೇಲೆ ಪರಿಣಾಮ ಉಂಟು ಮಾಡುತ್ತಿದೆ. ಸೂಕ್ತ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳದಿದ್ದರೆ ಈ ಪ್ರತಿಕೂಲ ಪರಿಣಾಮಗಳ ತೀವ್ರತೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಹೋಗುತ್ತದೆ.

ಭಾರತದಲ್ಲಿ ಇದು ಸಂಭವಿಸುತ್ತಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ
ವಿನಾಶವನ್ನು ತಡೆಯಲು ಅಲ್ಪಾವಧಿ ಮ
ದೀರ್ಘಾವಧಿ ಕ್ರಮಗಳನ್ನು ಕೈಗೊಳ್ಳಬೇಕು. ತಕ್ಷ
ಕ್ರಮಗಳೆಂದರೆ ಆಹಾರ, ಸೀಮೆಎಣ್ಣೆ, ಸುರ
ಕುಡಿಯುವ ನೀರು, ರೋಗ ತಡೆಯುವ ಮ
ಗುಣಪಡಿಸುವ ಔಷಧಿಗಳು, ಮಕ್ಕಳ ಆಹ
ಮತ್ತು ಮೇವು ಒದಗಿಸುವುದು.

ಪ್ರವಾಹಗ್ರಸ್ತ ಪ್ರದೇಶಗಳಲ್ಲಿ
ರಿಪೇರಿ ಮಾಡಲು, ಕಟ್ಟಲು ಹಣ ಮತ್ತು ಕ
ಸಾಮಗ್ರಿಗಳನ್ನು ಒದಗಿಸಬೇಕು. ರಸ್ತೆ, ರೈಲು ಮ
ಸಂಪರ್ಕ ವ್ಯವಸ್ಥೆಗಳನ್ನು ಮತ್ತೆ ಸ್ಥಾಪಿಸಲು ತ
ಕ್ರಮಗಳನ್ನು ಕೈಗೊಳ್ಳಬೇಕು. ದೀರ್ಘಾ
ಕ್ರಮಗಳೆಂದರೆ ಭೂಮಿ ಮತ್ತು ನೀ
ಸಂಪನ್ಮೂಲಗಳ ದಕ್ಷ ನಿರ್ವಹಣೆ
ಒಂದು ಸಮಗ್ರ ವ್ಯವಸ್ಥೆ, ಪ್ರತಿಕೂ
ಪರಿಸರ ಪರಿಣಾಮಗಳನ್ನು ಸರಿಪಡಿಸ
ಕ್ರಮಗಳು, ಮಣ್ಣಿನ ಸವೆತದ ಹತೋ
ಇತ್ಯಾದಿ.

ಪ್ರಧಾನ ಮಂತ್ರಿ ಡ
ಮನಮೋಹನ್ ಸಿಂಗ್ ರವರು ಅಸ್ಸಾ
ಪ್ರವಾಹ-ಪೀಡಿತ ಪ್ರದೇಶಗಳ ಭೇಟಿ
ಕಾಲದಲ್ಲಿ ಮತ್ತೆ-ಮತ್ತೆ ಸಂಭವಿಸು
ಪ್ರವಾಹ ಸಮಸ್ಯೆಯ ಪರಿಹಾರ
ಕ್ರಮಗಳ ಬಗ್ಗೆ ಕೇಂದ್ರ ಸರ್ಕಾರ
ಶಿಫಾರಸು ಮಾಡಲು ಒಂ
ಕಾರ್ಯಪಡೆಯನ್ನು ರಚಿಸುವುದ
ಪ್ರಕಟಿಸಿದ್ದಾರೆ. ಪ್ರವಾಹದ ಸಮಸ್ಯೆಗಳ
ಎದುರಿಸುವ ಕಾರ್ಯಸಾಧ್ಯ ಕ್ರಮಗ
ವಿಷಯದಲ್ಲೂ ಹಾಗೂ ಶಿಫಾರಸುಗಳನ್ನು ಸಕಾ
ಗಂಭೀರವಾಗಿ ತಗೊಂಡು ಅದನ್ನು ಜಾರಿ ಮಾಡ
ವಿಷಯದಲ್ಲೂ ಈ ಕ್ರಮದಿಂದ ಫಲಿತಾಂಶಗ
ಸಿಗುವಂತೆ ನೋಡಿಕೊಳ್ಳುವುದು ಬಹಳ ಮಹತ್ವ

ಈ ನಡುವೆ ಕೇಂದ್ರ ಸರ್ಕಾರ ಅಸ್ಸಾಂ ಮ
ಬಿಹಾರಕ್ಕೆ ಪ್ರವಾಹ ದುರಂತದ ಪರಿಣಾಮಗಳ
ಎದುರಿಸಲು ಸಾಕಷ್ಟು ಹಣ ಒದಗಿಸಬೇಕು.

ಮುಷ್ಕರ ಮತ್ತು ಬಂದ್ - ಜನತೆಯ ಪ್ರತಿಭಟನಾ ಹಕ್ಕು

ಬಂದ್ ಕರೆ ನೀಡಿದುದಕ್ಕಾಗಿ ಎರಡು ರಾಜಕೀಯ ಪಕ್ಷಗಳಿಗೆ ತಲಾ 20 ಲಕ್ಷ ರೂ. ದಂಡ ವಿಧಿಸಿದ ಮುಂಬೈ ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಸಿಪಿಐ(ಎಂ) ಪಾಲಿಟ್ ಬ್ಯೂರೊ ತನ್ನ ತೀವ್ರ ಅಸಮ್ಮತಿಯನ್ನು ವ್ಯಕ್ತಪಡಿಸಿದೆ.

2003 ರ ಜುಲೈ 30 ರಂದು ಶಿವಸೇನಾ ಮತ್ತು ಭಾರತೀಯ ಜನತಾ ಪಕ್ಷಗಳು ಮುಂಬೈ ಬಂದ್ ಕರೆ ನೀಡಿದ್ದರು. ಈ ಬಂದ್‌ನಿಂದಾಗಿ ಸಾರ್ವಜನಿಕರಿಗೆ. 50 ಕೋಟಿ ರೂ. ನಷ್ಟವುಂಟಾಗಿತ್ತು ಎಂದು. ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ (ಪಿಐಎಲ್)ಯನ್ನು ಮಾಡಲಾಗಿತ್ತು. ಈ ಕುರಿತು ವಿಚಾರಣೆ ನಡೆಸಿದ ಮುಂಬೈ ಉಚ್ಚ ನ್ಯಾಯಾಲಯವು ಅರ್ಜಿದಾರರ ವಾದವನ್ನು ಎತ್ತಿ ಹಿಡಿದು ತಲಾ 20 ಲಕ್ಷ ರೂ. ದಂಡ ವಿಧಿಸಿದೆ.

ಭಾರತದ ಸಂವಿಧಾನದಲ್ಲಿ ನಮೂದಿಸಿದ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಯ ಆಧಾರದಲ್ಲಿ ಜನತೆಯು ಪ್ರತಿಭಟನೆಯನ್ನು ನಡೆಸುವುದು, ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕುಗಳನ್ನು ಹೊಂದಿವೆ. ನ್ಯಾಯಾಲಯಗಳ ಮೂಲಕವಾಗಲೀ ಪ್ರತಿಭಟನಾ ಹಕ್ಕುಗಳನ್ನು ಮೊಟಕುಗೊಳಿಸಿದ್ದೇ ಆದಲ್ಲಿ ಅದು ಸರ್ವಾಧಿಕಾರಕ್ಕೆ ಅಥವಾ ಹಿಂಸೆಗೆ ಎಡೆಮಾಡಿಕೊಡುತ್ತದೆ. ಯಾರಾದರೂ ಈಗಿರುವ ಕಾನೂನುಗಳನ್ನು ಮುರಿದಿದ್ದೇ ಆದಲ್ಲಿ, ಅಂತಹವರ ವಿರುದ್ಧ ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು.

ಭಾರತದ ಜನತೆಯು ಮುಷ್ಕರ, ಹರತಾಳ ಅಥವಾ ಬಂದ್ ನಡೆಸುವ ಹಕ್ಕುಗಳನ್ನು ಬ್ರಿಟೀಷ್ ಆಡಳಿತದಲ್ಲಿಯೂ ಪಡೆದಿತ್ತು ಎನ್ನುವುದನ್ನು ನೆನಪಿಸಿದ ಸಿಪಿಐ(ಎಂ), ಜನತೆಯ ಹಕ್ಕುಗಳನ್ನು ರಕ್ಷಿಸಲು ಕೇಂದ್ರ ಸರಕಾರವು ಸೂಕ್ತ ಮಸೂದೆಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿದೆ.

ದಂಡ ಅನುಚಿತ - ಸಿಐಟಿಯು: ಮುಂಬೈ ಉಚ್ಚನ್ಯಾಯಾಲಯ ಬಂದ್ ಕುರಿತು ನೀಡಿದ ತೀರ್ಪು ಅನುಚಿತ ಎಂದು ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಡಬ್ಲ್ಯು.ಆರ್. ವರದರಾಜನ್ ಬಣ್ಣಿಸಿದ್ದಾರೆ.

ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯಲ್ಲಿ ಮುಂಬೈ ನಗರದ ಮಹಾನಗರ ಪಾಲಿಕೆಯೂ ಒಳಗೊಂಡಿರುವುದು ಹಾಸ್ಯಾಸ್ಪದ ಎಂದು ಬಣ್ಣಿಸಿದ ವರದರಾಜನ್, ಬಂದ್‌ನಿಂದಾಗಿ 50 ಕೋಟಿ ರೂ. ನಷ್ಟವುಂಟಾಗಿದೆ ಎಂದು ಹೇಳಿದುದು ಖಂಡನಾರ್ಹ ಎಂದು ಹೇಳಿದ್ದಾರೆ.

ಕಾರ್ಮಿಕರು ಸಾಮೂಹಿಕವಾಗಿ ಪ್ರತಿಭಟನೆ ನಡೆಸಿದಾಗ ಕಪೋಲಕಲ್ಪಿತ 'ನಷ್ಟ'ದ ಆಧಾರದಲ್ಲಿ ಪರಿಹಾರ ಸೂಚಿಸುವಂತೆ ಗ್ರಾಹಕ ವೇದಿಕೆಗಳೂ ತೀರ್ಪು ನೀಡುತ್ತಿವೆ. ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ನಡೆಯುತ್ತಿ ರುವ ಈ ಧಾಳಿಯನ್ನು ವಿರೋಧಿಸಬೇಕು ಎಂದು ಸಿಐಟಿಯು ಕರೆ ನೀಡಿದೆ.

ಓದುಗರಿಗೆ,

ಪತ್ರಿಕೆಯ ಈ ಸಂಚಿಕೆಯು ಅನಿವಾರ್ಯ ಕಾರಣಗಳಿಂದ 12 ಪುಟಗಳ ಬದಲು 8 ಪುಟಗಳಲ್ಲಿ ಪ್ರಕಟವಾಗುತ್ತಿದೆ. ಇದರ ಬೆಲೆಯು 2.00 ರೂ. ಆಗಿರುತ್ತದೆ. ಸಹಕರಿಸಬೇಕಾಗಿ ವಿನಂತಿ

ಸಂ.

ದಾಂಡೇಲಿ ನಗರದಲ್ಲಿ ಡಿವೈಎಫ್ಐ ಕಾರ್ಯಕರ್ತನ ಮೇಲೆ ಕೋಮುವಾದಿಗಳ ಹಲ್ಲೆ

ಉತ್ತರಕನ್ನಡವನ್ನು ಇತ್ತೀಚಿಗೆ ಕೇಸರಿ ಬಣ್ಣಕ್ಕೆ ತಿರುಗಿಸಲಾಗುತ್ತಿದೆಯೇ? ದೇಶದ ವಿವಿಧೆಡೆಯಲ್ಲಿ ಕಂಡುಬರುತ್ತಿರುವ ಕೋಮು ಗುಂಡಾಗಿರಿ ಈ ಜಿಲ್ಲೆಯಲ್ಲಿಯೂ ಹೆಚ್ಚಾಗುತ್ತಿವೆಯೇ? ತಮ್ಮ ಸಿದ್ಧಾಂತಕ್ಕೆ ವಿರುದ್ಧವಾಗಿರುವ ಜಾತ್ಯಾತೀತ ಶಕ್ತಿಗಳನ್ನು ಭಯ ಹುಟ್ಟಿಸುವ ಮೂಲಕ ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆಯೇ? ಎನ್ನುವ ಪ್ರಶ್ನೆಗೆ 'ಹೌದು' ಎನ್ನುವ ಉತ್ತರ ಇತ್ತೀಚಿನ ಉತ್ತರಕನ್ನಡದ ರಾಜಕೀಯ ಸಾಮಾಜಿಕ ಬೆಳವಣಿಗೆಯನ್ನು ವಿಶ್ಲೇಷಿಸಿದಾಗ ಬರುತ್ತದೆ.

ಇವರ ಭಾಗವಾಗಿಯೇ ಉತ್ತರಕನ್ನಡದ ಕೈಗಾರಿಕಾ ನಗರ ದಾಂಡೇಲಿಯಲ್ಲಿ ಡೆವಿಡ್ ಪ್ರಕಾಶ್ ದಾರ್ಲಾ ಅವರ ಮೇಲೆ ಮೊನ್ನೆ ಹಲ್ಲೆ ನಡೆದಿದೆ. 21 ವರ್ಷದ ಡೆವಿಡ್ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್‌ನ (DYFI)ನ ಕಾರ್ಯಕರ್ತ ಕೋಮುವಾದಿ ಸಂಘಟನೆಗೆ ಸೇರಿದ 5-6 ಯುವಕರು ಡೆವಿಡ್ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದಾರೆ. ಡೆವಿಡ್‌ಗೆ ತಲೆಗೆ, ಹೊಟ್ಟೆಗೆ ತೀವ್ರವಾದ ಗಾಯವಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಡೆವಿಡ್ ಬಂಗೂರು ನಗರ ಪದವಿ ಕಾಲೇಜಿನ ವಿದ್ಯಾರ್ಥಿ. ಪ್ರತಿದಿನದಂತೆ ಸಂಜೆ ಕಾಲೇಜು 'ಜಿಮ್'ಗೆ ಹೋಗುತ್ತಿರುವಾಗ ಬಜರಂಗದ ಗುಂಪಿಗೆ ಸೇರಿದವರೆನ್ನಲಾದ ದುಷ್ಕರ್ಮಿಗಳು ವಿನಾಕಾರಣ ಜಗಳಕ್ಕೆ ಇಳಿದು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ. ಡೆವಿಡ್ ಪ್ರತಿಭಟಿಸಿದಾಗ 4-5 ಜನ ಸೇರಿ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ
ಕಲ್ಲಿನಿಂದ ಡೆವಿಡ್ ತಲೆಗೆ ಬಲವಾಗಿ
ಹೊಡೆದಿದ್ದಾರೆ. ಹೊಟ್ಟೆಗೆ ಮರ್ಮಾಂಗಕ್ಕೆ
ಬೂಟಿನಿಂದ ಒಡೆದಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿ ನಗರ
ಠಾಣೆಯಲ್ಲಿ ಮಿಥುನ್ ಪಡವಳಿಕರ, ಪ್ರಶಾಂತ
ಯಾನೆ ಪಕ್ಕ, ಹಾಗೂ ರಾಜೇಶ ಎಂಬವರ
ಮೇಲೆ ದೂರು ದಾಖಲಾಗಿದೆ. ಒಬ್ಬಿಬ್ಬರ
ವಿರುದ್ಧ ಈಗಾಗಲೇ ಗುನ್ನೆ ದಾಖಲಾಗಿದೆ. ಆದ
ಈವರೆಗೂ ಪೊಲೀಸರು ಸಮರ್ಪಕ ಕ್ರಮ
ಕೈಗೊಂಡಿಲ್ಲ. ಡಿವೈಎಫ್ಐ ನಗರ ಸಮಿತಿ
ಜಿಲ್ಲಾ ಸಮಿತಿ, ಸಿಐಟಿಯು ತಕ್ಷಣ ಕ್ರಮ
ಕೈಗೊಳ್ಳದಿದ್ದರೆ ಉಗ್ರ ಪ್ರತಿಭಟನೆ ನಡೆಸುವುದಾಗಿ
ಎಚ್ಚರಿಸಿವೆ. ನಗರಠಾಣೆಯ ಸಬ್‌ಇನ್ಸ್‌ಪೆಕ್ಟರ
ಕ್ರಮ ಕೈಗೊಳ್ಳದಿರುವುದು ಸಂಶಯಕ
ಕಾರಣವಾಗಿದೆ. ಯಾಕೆ ಕ್ರಮ ಕೈಗೊಂಡಿಲ
ಎಂದು ಕೇಳಿದರೆ ಬಂಧಿಸಿ ಬಿಡುಗಡ
ಮಾಡಿರುವುದಾಗಿ ನುಣುಚಿಕೊಳ್ಳುತ್ತಿದ್ದಾರೆ.

ಇತ್ತೀಚಿಗೆ ನಗರದಲ್ಲಿ ಡಿವೈಎಫ್ಐ ವಿವಿ
ಜನಪರ ಕೆಲಸಗಳಿಂದ ತೀವ್ರವಾ
ಬೆಳೆಯುತ್ತಿದ್ದು, ಅಕ್ಕಿ, ಕೆರೊಸಿನ್ ಕಳ್ಳಸಾಗ
ಹಿಡಿದಿದ್ದರು, ರೆವಿನ್ಯೂ ಇಲಾಖೆಯಲ್ಲಿ ಲಂ
ಸ್ವೀಕರಿಸುತ್ತಿರುವಾಗ ಹಿಡಿದಿದ್ದು, ಆರೋಗ
ಇಲಾಖೆ ಹಗರಣ ಬಯಲು ಮಾಡಿದ್ದು
ಮತ್ತಿನ್ನಿತರ ಜನಪರ ಕೆಲಸಗಳ ಮೂಲ
ಬೆಳೆಯುತ್ತಿರುವುದನ್ನು ಸಹಿಸಲಾಗದ
ಶಕ್ತಿಗಳು ಹಲ್ಲೆಗೆ ಇಳಿದಿರುವುದು ಖಂಡನೀಯ
ತಕ್ಷಣ ಅಪರಾಧಿಗಳನ್ನು ಬಂಧಿಸಿ ಯೋಗ್ಯ ಶಿ
ವಿಧಿಸುವುದು ಜರೂರಾಗಿದೆ.

ರಕ್ಷಣಾ ಮಂತ್ರಿ ಬಟ್ಟೆ ಬಿಚ್ಚಿದರೂ ಪ್ರತಿಭಟಿಸದ ವಾಜಪೇಯಿ ಸರ್ಕಾರ

ಅಮೇರಿಕನ್ 'ಜೂನಿಯರ್-ಪಾರ್ಟ್‌ನರ್‌ಶಿಪ್' ಬಿಟ್ಟು, ಸ್ವತಂತ್ರ ವಿದೇಶಾಂಗ ನೀತಿ ರೂಪಿಸಬೇಕಾಗಿದೆ.

ಜಗತ್ತಿನೊಂದಿಗೆ ಸುತ್ತು

ಶರತ್‌ಚಂದ್ರ

ಜಾರ್ಜ್ ಫರ್ನಾಂಡಿಸ್ ರಕ್ಷಣಾಮಂತ್ರಿಯಾಗಿ ಅಮೇರಿಕಾ ಭೇಟಿ ಮಾಡಿರುವ ಎರಡು ಬಾರಿ ವಿಮಾನ ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿ ಅವರನ್ನು ಬಟ್ಟೆ ಬಿಚ್ಚಿ ತಪಾಸಣೆ ಮಾಡಿದರು ಎಂಬ ನಾಚಿಕೆಗೇಡಿನ ಪ್ರಕರಣ ವರದಿಯಾಗಿದೆ. ಇದನ್ನು ಹೊರಗೆಡವಿದ್ದು ಅಮೇರಿಕನ್ ಅಧಿಕಾರಿಯೊಬ್ಬರ ಪುಸ್ತಕ. ಇಂಡಿಯಾವನ್ನು ಅಮೇರಿಕದ 'ಜೂನಿಯರ್ ಪಾರ್ಟನರ್' ಮಾಡುವ ದಿವಾಳಿಕೋರ ಏಕ-ಅಂಶದ ಕಾರ್ಯಕ್ರಮವಿದ್ದ ಎನ್.ಡಿ.ಎ ಸರ್ಕಾರ ಪ್ರತಿಭಟಿಸಲೂ ಇಲ್ಲ ಎಂಬುದು ಯಾರಿಗೂ ಆಶ್ಚರ್ಯ ತಂದಿಲ್ಲ. ಎನ್‌ಡಿಎ ಸರ್ಕಾರದ ಈ ನಾಚಿಕೆಗೇಡಿನ ನೀತಿ ಬದಲಾಯಿಸಬೇಕು. ಕನಿಷ್ಟ ಸಮಾನ ಕಾರ್ಯಕ್ರಮದಲ್ಲಿ ಹೇಳಿದಂತೆ ಸ್ವತಂತ್ರ ವಿದೇಶಾಂಗ ನೀತಿ ರೂಪಿಸಬೇಕಾಗಿದೆ. ಅಮೇರಿಕ ಎಲ್ಲಾ ಪ್ರವಾಸಿಗರಿಗೆ ಬೆರಳಚ್ಚು ಮತ್ತು ಫೋಟೋ ತೆಗೆಯುವ ವ್ಯವಸ್ಥೆ ಆರಂಭಿಸಿದಾಗ, ಎಲ್ಲಾ ಅಮೇರಿಕನ್ ಪ್ರವಾಸಿಗರಿಗೆ ಬ್ರೆಜಿಲ್ ಪ್ರವೇಶಿಸುವಾಗ ಅದೇ ರೀತಿಯ ವ್ಯವಸ್ಥೆ ಆರಂಭಿಸುವ ಮೂಲಕ ಪ್ರತಿಭಟಿಸಿದ ಬ್ರೆಜಿಲ್‌ನಿಂದ ಯುಪಿಎ ಸರ್ಕಾರ ಪಾಠ ಕಲಿಯಬೇಕಾಗಿದೆ. ಅಮೇರಿಕದ ಜತೆ ಮಿಲಿಟರಿ ಒಪ್ಪಂದಗಳ ಬಗ್ಗೆ ಪುನರಾಲೋಚನೆ ಮಾಡಬೇಕಾಗಿದೆ ಎನ್ನುತ್ತಾರೆ. ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಪ್ರಕಾಶ್‌ಕಾರತ್.

ಜಾರ್ಜ್ ಫರ್ನಾಂಡಿಸ್ ಕೇಂದ್ರ ರಕ್ಷಣಾ ಮಂತ್ರಿಯಾಗಿ ಅಮೇರಿಕಕ್ಕೆ ಎರಡು ಬಾರಿ (2002 ಮತ್ತು 2003 ಭೇಟಿ ನೀಡಿದ್ದರು. .. ಅಮೇರಿಕದ ವಿಮಾನನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿ ಅವರನ್ನು ಬಟ್ಟೆ ಬಿಚ್ಚಿ ತಪಾಸಣೆ ಮಾಡಿದರಂತೆ. ಅಮೇರಿಕದ ಬಗ್ಗೆ ಬಿಜೆಪಿ ನಾಯಕತ್ವದ ಅವಧಿಯಲ್ಲಿ ಇದೊಂದು ಸಣ್ಣ ಅಡಿಟಿಪ್ಪಣಿಯಷ್ಟೆ. (ಅಮೇರಿಕನ್ ಅಧಿಕಾರಿ) ಸ್ಟ್ರೋಪ್ ತಲ್‌ಬೊಡ್ ಪುಸ್ತಕದಿಂದಷ್ಟೆ ಭಾರತದ ರಕ್ಷಣಾಮಂತ್ರಿಗೆ ಅವಮಾನ ಮಾಡಿದ ಈ ಪ್ರಕರಣ ಬೆಳಕಿಗೆ ಬಂದಿದೆ. ಈ ಎರಡು ಘಟನೆಗಳು ನಡೆದವು ಎಂದು ಜಾರ್ಜ್ ಪುಷ್ಟೀಕರಿಸಿದ್ದಾರೆ. ತಾನು ಈ ಪ್ರಕರಣದ ಬಗ್ಗೆ ವಿದೇಶ ಮಂತ್ರಿ ಮತ್ತು ಪ್ರಧಾನಿಗಳಿಗೆ ವರದಿ ಮಾಡಿದ್ದೆ ಎಂತಲೂ ಹೇಳಿದ್ದಾರೆ. ಆದರೆ ಎರಡೂ ಪ್ರಕರಣಗಳಲ್ಲಿ ಫೆರ್ನಾಂಡೀಸ್ ಮತ್ತು ವಾಜಪೇಯಿ ಸರ್ಕಾರ ಪಾನವ್ರತ ತಾಳಿತ್ತು. ಒಂದು ಸಣ್ಣ ಕ್ಷೀಣ ಪ್ರತಿಭಟನೆ ಸಹ ಮಾಡಿಲ್ಲ. ವಾಜಪೇಯಿ ಸರ್ಕಾರ ಅಮೇರಿಕದ ಬಗ್ಗೆ ತೋರಿಸುತ್ತಿದ್ದ ದಾಸ್ಯಭಾವನೆ ಬಗ್ಗೆ ಒಳ್ಳೆಯ ಉದಾಹರಣೆ. ಇದು ಕೋಟ್ಯಾಂತರ ಭಾರತೀಯರನ್ನು ರೊಚ್ಚಿಗೆಬ್ಬಿಸಿದೆ.


ವಾಶಿಂಗ್‌ಟನ್‌ನ ಸಾಮಂತರು

ತಾವು ಸೂಪರ್- ರಾಷ್ಟ್ರೀಯವಾದಿಗಳು ಎಂದು ಪೋಸು ಕೊಡುತ್ತಿದ್ದ ಬಿಜೆಪಿ ನಾಯಕರು ವಾಶಿಂಗ್‌ಟನ್‌ನ ಸಾಮಂತರು ಎಂದು ಹಲವು ಪ್ರಕರಣಗಳು ಸ್ಪಷ್ಟಪಡಿಸಿದ್ದವು. ಫೆರ್ನಾಂಡಿಸ್ ಪ್ರಕರಣ ಇನ್ನೊಂದು ಉದಾಹರಣೆಯಷ್ಟೆ. ಪೊಖ್ರಾನ್ ಸ್ಫೋಟ ಮತ್ತು ಸೆಪ್ಟೆಂಬರ್-11 ದಾಳಿಯ ನಂತರ ಅಮೇರಿಕಾದ ಬಗ್ಗೆ ಜಿ-ಹುಜೂರ್ ಧೋರಣೆ ವ್ಯಕ್ತಪಡಿಸಿದ ವಾಜಪೇಯಿ ಪತ್ರಗಳು, ಕುಬ್ರಾನ್ ರಾಷ್ಟ್ರೀಯ ಕ್ಷಿಪಣಿ ರಕ್ಷಣಾವ್ಯೂಹದ ಕಾರ್ಯಕ್ರಮವನ್ನು ಸ್ವಾಗತಿಸಿದ್ದು- ಇವೆಲ್ಲ ಅಂತಹ ಪ್ರಕರಣಗಳೇ. ಗಡಿಯಾಚೆಗೆ ಇರುವ ಜನರಲ್ ಮುಶರಫ್ ಸರ್ಕಾರವಷ್ಟೆ ಅಮೇರಿಕಾಕ್ಕೆ ವಿಧೇಯ ಸರ್ಕಾರ ಎಂದು ಪ್ರದರ್ಶಿಸುವ ಯಾವ ಅವಕಾಶವನ್ನು ಬಿಟ್ಟುಕೊಡಲಿಲ್ಲ. ಯಾರು ಅಮೇರಿಕನ್ ಸಾಮ್ರಾಜ್ಯಶಾಹಿ ನಂಬಲರ್ಹ ಏಜೆಂಟ್ ಎಂಬ ಬಗ್ಗೆ ಇಬ್ಬರಲ್ಲೂ ಭಾರೀ ಪೈಪೋಟಿ.

ವಿದೇಶಾಂಗ ನೀತಿ ಜನರ ಕಾಳಜಿಗಳಲ್ಲಿ ಸೇರಿಲ್ಲ. ಅದು ರಾಯಭಾರ ನಿಗೂಢತೆ ಮತ್ತು ಗೋಪ್ಯತೆಯಲ್ಲಿ ಮುಳುಗಿರುತ್ತದೆ ಎನ್ನಲಾಗುತ್ತದೆ. ಆದರೆ ವಿದೇಶಾಂಗ ನೀತಿಯ ನಿಜ ಸ್ವರೂಪ, ಒಮ್ಮೊಮ್ಮೆ ಕೆಲವು ನಾಟಕೀಯ ಸನ್ನಿವೇಶದಲ್ಲಿ ಜನರ ಮುಂದೆ ಬರುತ್ತದೆ. ಇರಾಕ್‌ಗೆ ಭಾರತದ ಸೈನ್ಯ ಕಳುಹಿಸುವ ಬಗ್ಗೆ ಅಮೇರಿಕನ್ ಸರ್ಕಾರಕ್ಕೆ ವಾಜಪೇಯಿ ಸರ್ಕಾರದ ಭರವಸೆ ಇಂತಹ ಪ್ರಕರಣಗಳಲ್ಲೊಂದು. ಮೇಜರ್ ಜನರಲ್ ಒಬ್ಬರ ನಾಯಕತ್ವದಲ್ಲಿ ರಾಷ್ಟ್ರೀಯ ರೈಫಲ್ಸ್ ಡಿವಿಜನ್ ಒಂದು ಇರಾಕ್‌ಗೆ ಹೋಗಲು ಸರ್ಕಾರ ಸಜ್ಜು ಮಾಡಿತ್ತು ಎಂಬುದು ಈಗ ಎಲ್ಲರಿಗೂ ಗೊತ್ತಿರುವ ಸಂಗತಿ. ಈ ಬಗ್ಗೆ ಭಾರಿ ಸಾರ್ವಜನಿಕ ಆಕ್ರೋಶ ವ್ಯಕ್ತವಾದಾಗ, ಈ ಭರವಸೆಯನ್ನು ವಾಜಪೇಯಿ ಹಿಂತೆಗೆದುಕೊಳ್ಳಬೇಕಾಯಿತು.

ಬ್ರೆಜಿಲ್‌ನಿಂದ ಕಲಿಯಬೇಕು.

ವಾಜಪೇಯಿ ಸರ್ಕಾರಕ್ಕೆ ಬೆನ್ನೆಲುಬು ಇಲ್ಲ ಅಂತ, ಅಮೇರಿಕನ್ನರಿಗೆ ಈ ಫೆರ್ನಾಂಡೀಸ್ ಪ್ರಕರಣಕ್ಕಿಂತ ಬಹಳ ಹಿಂದೆ ಗೊತ್ತಾಗಿರಬೇಕು. ತನ್ನ ಆಡಳಿತದ ಆರು ವರ್ಷಗಳಲ್ಲಿ ಅಮೇರಿಕದ 'ಜೂನಿಯರ್ ಪಾರ್ಟನರ್' ಆಗಲು ವಾಜಪೇಯಿ ಸರ್ಕಾರ ಹಗಲು-ರಾತ್ರಿ ಹೆಣಗಿತು. ರಕ್ಷಣಾಮಂತ್ರಿಗೆ ಮಾಡಲಾದ ಇಂತಹ ಅವಮಾನದ ಬಗ್ಗೆ ಯಾಕೆ ಮೌನವ್ರತ ಆಚರಿಸಿತ್ತು ಬಿಜೆಪಿ ಸರ್ಕಾರ? ಅದರ ಬಗ್ಗೆ ಸಮಜಾಯಿಸಿ ಕೊಡಲು ಈಗಲೂ ಯಾಕೆ ಮುಂದೆ ಬರುತ್ತಿಲ್ಲ- ಎಂಬುದು ಬಿಜೆಪಿಯ ಸ್ವರೂಪದ ಬಗ್ಗೆ ಬಹಳ ಹೇಳುತ್ತದೆ. ಇಂಡಿಯಾದಂತೆಯೇ ಇನ್ನೊಂದು ವಿಕಾಸಶೀಲ ದೇಶ-ಬ್ರೆಜಿಲ್-ನಿಂದ ನಮ್ಮ ಆಳುವ ವಲಯಗಳು ಪಾಠ ಕಲಿಯಬೇಕು. ಅಮೇರಿಕಕ್ಕೆ ಬರುವ ಎಲ್ಲಾ ಪ್ರವಾಸಿಗಳಿಗೆ ಬೆರಳಚ್ಚು ಮತ್ತು ಫೋಟೋ ತೆಗೆಸಿಕೊಳ್ಳುವುದು ಕಡ್ಡಾಯ



ಮಾಡಿದಾಗ, ಬ್ರೆಜಿಲ್ 'ಸೇರಿಗೆ ಸವ್ವಾ ಸೇರು' ನೀತಿಯಿಂದ ನಾವು ಕಲಿಯಬೇಕಾಗಿದೆ. ಫೆಡರಲ್ ಕೋರ್ಟು ಜಡ್ಜ್ ಆಜ್ಞೆ ಪ್ರಕಾರ, ಬ್ರೆಜಿಲ್ ಇಂತಹುದೇ ನಿರ್ಬಂಧನೆಗಳನ್ನು ಬ್ರೆಜಿಲ್ ಭೇಟಿ ನೀಡುವ ಅಮೇರಿಕನ್ನರ ಮೇಲೆ ವಿಧಿಸಿತು. ಈ ಜನವರಿಯಿಂದ ಬ್ರೆಜಿಲ್ ಭೇಟಿ ನೀಡುವ ಅಮೇರಿಕನ್ನರೆಲ್ಲಾ ಬೆರಳಚ್ಚು ಮತ್ತು ಫೋಟೋ ತೆಗೆಸಿಕೊಳ್ಳಬೇಕು. ಅಮೇರಿಕ ಬ್ರೆಜಿಲ್ 'ಸವಾಸೇರು' ನೀತಿಗೆ ಪ್ರತಿಭಟಿಸಿದೆ. ಆದರೆ ಬ್ರೆಜಿಲ್ ಜಗ್ಗಲಿಲ್ಲ. ಚೀನಾ ತನ್ನ ನಾಗರಿಕರಿಗೆ ಬೆರಳಚ್ಚು ಮತ್ತು ಫೋಟೋದ ನಿರ್ಬಂಧನೆಗಳ ಬಗ್ಗೆ ತೀವ್ರ ಪ್ರತಿಭಟನೆಯನ್ನು ಅಮೇರಿಕಕ್ಕೆ ಸಲ್ಲಿಸಿತ್ತು. ವಾಜಪೇಯಿ ಸರ್ಕಾರ ಇಂತಹ ಯಾವುದೇ ಕ್ರಮ ತೆಗೆದುಕೊಳ್ಳುತ್ತದೆ ಎಂದೂ ನಿರೀಕ್ಷಿಸಿಯೂ ಇರಲಿಲ್ಲ.

ಅಮೇರಿಕನ್ ಜಾಗತಿಕ ವ್ಯೂಹದ ಭಾಗ

ಈ ಪ್ರಕರಣಗಳಲ್ಲಿ ವಾಜಪೇಯಿ



ಸರ್ಕಾರದ ದುರ್ನಡತೆಗಿಂತಲೂ ಗಂಭೀರವಾದ ಪ್ರಮಾದ ಇದೆ. ಅಮೆರಿಕನ್ ಜಾಗತಿಕ ಮಿಲಿಟರಿ ವ್ಯೂಹಕ್ಕೆ ಭಾರತವನ್ನು ಸೇರಿಸುವ ಪ್ರಯತ್ನ ನಡೆಸಿದ್ದು ಇವರ ಪ್ರಮಾದಗಳಲ್ಲಿ ಒಂದು. 1998 ರಿಂದ ಆರಂಭವಾದ ವ್ಯಾಪಕ ಮಿಲಿಟರಿ ವ್ಯೂಹಾತ್ಮಕ ಸರಕಾರದ ಭಾಗವಾಗಿ, ಅಮೆರಿಕ ಭಾರತವನ್ನು ಅದರ ಜಾಗತಿಕ ವ್ಯೂಹದ ಭಾಗವಾಗಿ ಬೆಳೆಯುತ್ತಿದೆ. ಈ ಬಗೆಗಿನ ವಾಜಪೇಯಿ ಸರ್ಕಾರದ ನೀತಿ ಬಗ್ಗೆ ಯುಪಿಎ ಸರ್ಕಾರ ತತ್‌ಕ್ಷಣ ಗಮನಹರಿಸಬೇಕಾಗಿದೆ.

ಮೊದಲನೆಯ, ಅಮೆರಿಕದ ಕ್ಷಿಪಣಿ ರಕ್ಷಣಾ ವ್ಯವಸ್ಥೆಯಲ್ಲಿ ಭಾರತದ ಪಾಲ್ಗೊಳ್ಳುವಿಕೆ, ಬುಶ್ ಸರ್ಕಾರ 53 ಶತಕೋಟಿ ಡಾಲರು ಖರ್ಚಿನಲ್ಲಿ ರಾಷ್ಟ್ರೀಯ ಕ್ಷಿಪಣಿ ರಕ್ಷಣಾ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಅಮೆರಿಕದೊಳಗೂ ಹೊರಗೂ ಈ ಕಾರ್ಯಕ್ರಮಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಇದು ಕಾರ್ಯಸಾಧ್ಯವಲ್ಲದ ಜಾಗತಿಕ ಅಧಿಪತ್ಯ ಸ್ಥಾಪಿಸುವ ಪ್ರತಿ-ಕ್ರಮ ಕಾರ್ಯಕ್ರಮ ಎಂಬುದು ಅದರ ಟೀಕಾಕಾರರ ಅಭಿಪ್ರಾಯ. ಭಾರತ-ಅಮೆರಿಕ ರಕ್ಷಣಾ ನೀತಿ ಗುಂಪಿನಲ್ಲಿ ಕ್ಷಿಪಣಿ ರಕ್ಷಣೆ ಬಗ್ಗೆ ಕಾರ್ಯಕಾರಿ ಗುಂಪು ನೇಮಿಸಲಾಗಿದೆ. ಈ ಅಮರೀಕನ್ ಕಾರ್ಯಕ್ರಮದಲ್ಲಿ ಭಾರತ ಭಾಗವಹಿಸುವ ಬಗ್ಗೆ ವಾಜಪೇಯಿ ಸರ್ಕಾರ ಮಾತುಕತೆ ನಡೆಸುತ್ತಿತ್ತು. ಹಿಂದಿನ ಸರ್ಕಾರದಲ್ಲಿದ್ದ ಯುದ್ಧ-ಕೋರ ಅಮೆರಿಕನ್-ಪರ ವಲಯಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಒಂದುಕಡೆ. ಅಮೆರಿಕದ ಕೃಪಾಕಟಾಕ್ಷಕ್ಕೆ ಪಾತ್ರರಾಗುವ ಒಂದು ವಿಧಾನವಾಗಿ ಪರಿಗಣಿಸಿದ್ದರು. ಇನ್ನೊಂದು ಕಡೆ ಪಾಕಿಸ್ತಾನದ ಕ್ಷಿಪಣಿ ಕಾರ್ಯಕ್ರಮಕ್ಕೆ ಇದು ಪ್ರತಿಕ್ರಮ ಎಂದುಕೊಂಡಿದ್ದರು. ಒಂದು ಕಡೆ ಇದು ಕೆಲಸಕ್ಕೆ ಬಾರದ ಕಾರ್ಯಕ್ರಮದಲ್ಲಿ ಹಣದ ದುರ್ವ್ಯಯ. ಇನ್ನೊಂದು ಕಡೆ ನಮ್ಮ ಉಪಖಂಡದಲ್ಲಿ ಶಸ್ತ್ರಾಸ್ತ್ರ - ಪೈಪೋಟಿ ನಾಶಕ್ಕೆ ಆಹ್ವಾನ.

ಅಣ್ವಸ್ತ್ರ ಪ್ರಸರಣ ಪ್ಯಾದೆ

ಅಮೆರಿಕ- ಪ್ರಾಯೋಜಿತ ಅಣ್ವಸ್ತ್ರ ಪ್ರಸರಣ ಭದ್ರತಾ ಕಾರ್ಯಕ್ರಮ ಇನ್ನೊಂದು ಗಮನಿಸಬೇಕಾದ ಅಂಶ. ಭಾರತ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಬುಶ್ ಸರ್ಕಾರ ಬಹುವಾಗಿ ಪ್ರಯತ್ನಿಸಿತ್ತು. ಅಮೆರಿಕನ್ ವಿದೇಶಾಂಗ ಸಚಿವ ಈ ಜನವರಿಯ ಭೇಟಿಯಲ್ಲಿ ಈ ಬಗ್ಗೆ ಒತ್ತಾಯಿಸಿದ್ದರು. ಅಣ್ವಸ್ತ್ರ ಮತ್ತಿತರ ಸಾಮೂಹಿಕ ನಾಶದ ಅಸ್ತ್ರಗಳ ಪ್ರಸರಣ ತಡೆಯುವ ನೆಪದಲ್ಲಿ, ಅಂತರಾಷ್ಟ್ರೀಯ ಜಲಮಾರ್ಗಗಳಲ್ಲಿ ಏಕ-ಪಕ್ಷೀಯವಾಗಿ ಬೇರೆ ದೇಶಗಳ ಹಡಗುಗಳನ್ನು ನಿಲ್ಲಿಸುವ ಯೋಜನೆ ಅಮೇರಿಕದ್ದು. ಇರಾನ್, ಚೀನಾ, ಉತ್ತರಕೋರಿಯಾದ ಹಡಗುಗಳ ಮೇಲೆ ಇಂತಹ ಕ್ರಮಗಳ ಬಗ್ಗೆ ಯೋಜಿಸುತ್ತಿತ್ತು. ಭಾರತ ಮಿಲಿಟರಿ ನೌಕಾ ಬಲವನ್ನು ಇದರಲ್ಲಿ ತೊಡಗಿಸಬೇಕು ಎಂದು ಬುಶ್ ಸರ್ಕಾರ ಒತ್ತಾಸೆ ಮಾಡಿತ್ತು. ಈ ಕಾರ್ಯಕ್ರಮ ಅಮೆರಿಕದ ನಿಕಟ ಸಹಚರರಾದ ಬ್ರಿಟನ್, ಫ್ರಾನ್ಸ್, ಜರ್ಮನಿ, ಜಪಾನ್ ಮುಂತಾದ 11 ದೇಶಗಳು ಇವೆ. ಈ 'ಕ್ಲಬ್ಬಿ'ಗೆ ಸೇರಬೇಕೆಂಬುದು ವಾಜಪೇಯಿ ಮಹದಾಸೆ.

ಸ್ವತಂತ್ರ ವಿದೇಶಾಂಗ ನೀತಿ

ಯುಪಿಎ ಸರ್ಕಾರ ಈ ಬಗ್ಗೆ ಕನಿಷ್ಟ ಸಾಮಾನ್ಯ ಕಾರ್ಯಕ್ರಮದಲ್ಲಿ ನಮೂದಿಸಲಾದ ನಿರ್ದೇಶನಗಳ ಮೇಲೆ ಆಧಾರಿತ ವಿದೇಶಾಂಗ ನೀತಿಯ ಆಧಾರದ ಮೇಲೆ ನಿರ್ಧರಿಸಬೇಕು "ಹಿಂದಿನ ಪರಂಪರೆಯಂತೆ ಸ್ವತಂತ್ರ ವಿದೇಶಾಂಗ ನೀತಿ ಅನುಸರಿಸಲಾಗುವುದಿಲ್ಲ. ಜಾಗತಿಕ ಸಂಬಂಧಗಳಲ್ಲಿ ಏಕ-ಪಕ್ಷೀಯತೆಯನ್ನು ವಿರೋಧಿಸಿ, ಬಹು-ಪಕ್ಷೀಯತೆಯನ್ನು ಎತ್ತಿಹಿಡಿಯುವುದು."

ಅಮೆರಿಕದ ಜತೆ ನಿಕಟ ಬಾಂಧವ್ಯ ಮುಂದುವರೆಯುವ ಜತೆಗೆ, ಅದರ ವ್ಯೂಹಾತ್ಮಕ ಮಿಲಿಟರಿ ಆಕ್ರಮತೆಯಲ್ಲಿ ಸಿಲುಕದಿರುವುದಕ್ಕೆ ಈ ನೀತಿ ಅನುವು ಮಾಡಿಕೊಡುತ್ತದೆ. ಇದನ್ನು ಪಾಲಿಸಬೇಕಾದರೆ ಯುಪಿಎ ಸರ್ಕಾರ ಹಿಂದಿನ ವಾಜಪೇಯಿ ಸರ್ಕಾರ ದಿವಾಳಿಕೋರ ವಿದೇಶ ನೀತಿಯನ್ನು ಬದಲಿಸಬೇಕಾಗಿದೆ.

ಯುಪಿಎ ಸರ್ಕಾರದ ಮೊದಲ ನೀತಿ-ನಿರೂಪಣಾ ಅವಕಾಶ ಅಧ್ಯಕ್ಷರ ಭಾಷಣದಲ್ಲಿ ವಿದೇಶ ನೀತಿಯ ಬಗ್ಗಿನ ಅಭಿಪ್ರಾಯ, ಕನಿಷ್ಟ ಸಾಮಾನ್ಯ ಕಾರ್ಯಕ್ರಮಕ್ಕೆ ಅನುಗುಣವಲ್ಲ. ಅಮೇರಿಕದ ಜತೆ ವ್ಯೂಹಾತ್ಮಕ ಸಂಬಂಧ ಮತ್ತು ಇಸ್ರೇಲ್ ಜತೆ ಸಹಕಾರದ ಬಗ್ಗೆ ರಾಗ ಎಳೆದಿದೆ. ಎಡ ಮತ್ತು ಪ್ರಗತಿಪರ ಶಕ್ತಿಗಳಿಗೆ ಕನಿಷ್ಟ ಕಾರ್ಯಕ್ರಮದಲ್ಲಿ ಹೇಳಿರುವ ವಿದೇಶಾಂಗ ನೀತಿಯನ್ನು ಸ್ಪಷ್ಟವಾಗಿ ನಿರೂಪಿಸಿ ಜಾರಿಗೆ ತರುವುದು ಬರುವ ದಿನಗಳಲ್ಲಿ ಪ್ರಮುಖ ಕಾಳಜಿಯಾಗಿರುತ್ತದೆ.



ಮುಂಡನ

ಹರಿಶಂಕರ ಪರಸಾಯಿ

ಯಾವುದೊ ಒಂದು ದೇಶದ ಸಂಸತ್ತಿನಲ್ಲಿ ಬಹಳ ಕೋಲಾಹಲ ಉಂಟಾಯಿತು. ಕೋಲಾಹಲಕ್ಕೆ ಕಾರಣ ಯಾವುದೇ ರಾಜಕೀಯ ಸಮಸ್ಯೆಯಾಗಿರಲಿಲ್ಲ. ಬದಲಿಗೆ ಒಬ್ಬ ಮಂತ್ರಿ ಆಕಸ್ಮಿಕವಾಗಿ ತಲೆ ಬೋಳಿಸಿಕೊಂಡಿರುವುದೇ ಆಗಿತ್ತು. ನಿನ್ನೆಯತನಕ ಅವರ ತಲೆಯ ಮೇಲೆ ಉದ್ದನೆಯ ಗುಂಗುರು ಕೂದಲುಗಳಿದ್ದವು. ಆಸ್ಮಿಕವಾಗಿ ಇವತ್ತು ತಲೆ ಬೋಳಾಗಿತ್ತು.

ಸಂಸತ್ ಸದಸ್ಯರು ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದರು. ಒಬ್ಬನೆಂದ - "ಪ್ರಾಯಶಃ ತಲೆಯೊಳಗೆ ಹೇನಾಗಿರಬೇಕು." ಇನ್ನೊಬ್ಬನೆಂದ "ಹೆಚ್ಚಿನಂಶ ತಲೆಯೊಳಗೆ ವಿಚಾರಗಳು ನುಗ್ಗಲು ಕೂದಲುಗಳ ಪರದೆ ಅಡ್ಡಾಗಿರಬೇಕು." ಮಗದೊಬ್ಬನೆಂದ - "ಇವರ ಕುಟುಂಬದಲ್ಲಿ ಯಾರೋ ಸತ್ತು ಹೋಗಿರಬೇಕು." ಆದರೆ ಮೊದಲಿನಂತೆಯೇ ಅವರು ಖುಷಿಯಾಗಿಯೇ ಇದ್ದರು.

ಕೊನೆಗೆ ಒಬ್ಬ ಕೇಳಿದ - "ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಮನೆಯಲ್ಲಿ ಯಾರಾದರೂ ತೀರಿ ಹೋದರೇ-ಎಂಬುದನ್ನು ನಾನು ಕೇಳಬಹುದೇ?" ಮಂತ್ರಿ ಉತ್ತರಿಸಿದರು- "ಇಲ್ಲ."

ಸದಸ್ಯರು ಬಿಡಲಿಲ್ಲ, "ಮಂತ್ರಿಗಳು ಯಾರ ವಿರುದ್ಧ ಬಿಲ್ ಮಂಡಿಸುವ ಆಲೋಚನೆಯಲ್ಲಿದ್ದರೋ ಅವರೇನಾದರೂ ಇವರ ತಲೆ ಬೋಳಿಸಿರಬಹುದೇ?"

ಒಬ್ಬ ಸದಸ್ಯನೆಂದ - "ಮಾನ್ಯ ಅಧ್ಯಕ್ಷರೆ, ತನ್ನ ತಲೆ ಬೋಳಾಗಿರುವುದು ಮಾನ್ಯ ಮಂತ್ರಿಗಳಿಗೆ ತಿಳಿದಿದೆಯೇ? ಅದು ಹೌದಾದರೆ ಬೋಳಿಸಿದವರು ಯಾರು?" ಮಂತ್ರಿ ಗಂಭೀರವಾಗಿಯೇ ಉತ್ತರಿಸಿದ-"ನನ್ನ ತಲೆ ಬೋಳಾಗಿದೆಯೇ ಇಲ್ಲವೇ ಎಂದು ನಾನು ಹೇಳಲಾರೆ." ಹಲವಾರು ಸದಸ್ಯರು ಕೂಗಾಡಿದರು- "ಬೋಳಾಗಿದೆ, ನಮಗೆ ತೋರುತ್ತಿದೆ."

ಮಂತ್ರಿಯೆಂದ- "ಎಲ್ಲರಿಗೂ ತೋರುವುದರಿಂದ ಏನೂ ಆಗುವುದಿಲ್ಲ.

ನನ್ನ ತಲೆ ಬೋಳಾಗಿದೆಯೇ ಇಲ್ಲವೇ ಎಂಬುದಕ್ಕೆ ಸರಕಾರವೇ ವಿಚಾರಣೆ ನಡೆಸುವುದು."

ಒಬ್ಬ ಸದಸ್ಯನೆಂದ - "ಇದರ ವಿಚಾರಣೆ ಈಗಲೇ ಆಗುತ್ತದೆ. ಮಾನ್ಯ ಮಂತ್ರಿಗಳು ತಮ್ಮ ಕೈಯಿಂದ ತಲೆ ಸವರಿ ನೋಡಿಕೊಳ್ಳಲಿ."

ಮಂತ್ರಿ ಉತ್ತರಿಸಿದ - "ನಾನು ಖಂಡಿತವಾಗಿಯೂ ನನ್ನ ಕೈಯಿಂದ ತಲೆ ಸವರಿಕೊಂಡು ನೋಡುವುದಿಲ್ಲ. ಸರಕಾರ ಈ ವಿಷಯದಲ್ಲಿ ಗಡಿಬಿಡಿ ಮಾಡಲು ಬಯಸುವುದಿಲ್ಲ. ಆದರೆ ಈ ವಿಚಾರದಲ್ಲಿ ಸರಕಾರವು ವಿವರವಾದ ತಪಾಸಣೆ ನಡೆಸಿ ವರದಿಯನ್ನು ಸದನದ ಮುಂದೆ ಮಂಡಿಸುವುದೆಂದು ನಾನು ಭರವಸೆ ಕೊಡುತ್ತೇನೆ."

ಸದಸ್ಯರು ಗದ್ದಲವೆಬ್ಬಿಸಿದರು-"ಇದರ ವಿಚಾರಣೆಯ ಅಗತ್ಯವಾದರೂ ಏನು? ತಲೆಯೂ ನಿಮ್ಮದೆ, ಕೈಯೂ ನಿಮ್ಮದೆ. ತಮ್ಮ ಕೈಯಿಂದ ತಲೆ ಸವರಿಕೊಂಡು ನೋಡಲಿಕ್ಕೆ ಮಾನ್ಯ ಮಂತ್ರಿಗಳಿಗೆ ಇರುವ ತೊಂದರೆಯಾದರೂ ಏನು?" ಮಂತ್ರಿಯೆಂದ- "ತಲೆಯೂ ನನ್ನದೇ ಕೈಯೂ ನನ್ನದೆ ಎನ್ನುವ ಸದಸ್ಯರ ಮಾತಿಗೆ ನನ್ನ ಸಮ್ಮತಿಯಿದೆ. ಆದರೆ ನನ್ನ ಕೈಗಳನ್ನು ಪರಂಪರೆ ಮತ್ತು ನೀತಿಗಳು ಕಟ್ಟಿಹಾಕಿವೆ. ನನ್ನ ತಲೆಯ ಮೇಲ್ ಕೈ ಸವರಿಕೊಳ್ಳಲು ನಾನು ಸ್ವತಂತ್ರನಲ್ಲ. ಸರಕಾರಕ್ಕೆ ಅದರದ್ದೇ ಆದ ಒಂದು ನಿಶ್ಚಿತವಾದ ನೀತಿ ಸಂಹಿತೆಯಿದೆ. ವಿರೋಧಿ ಸದಸ್ಯರ ಒತ್ತಡಕ್ಕೆ ಸಿಲುಕಿ ನಾನು ಅದನ್ನು ಭಂಗಪಡಿಸಲು ಇಷ್ಟಪಡುವುದಿಲ್ಲ. ಈ ಕುರಿತು ಸದನಕ್ಕೆ ನಾನೊಂದು ಹೇಳಿಕೆಯನ್ನು ಕೊಡುತ್ತೇನೆ."

ಸಂಜೆ ಮಾನ್ಯ ಮಂತ್ರಿವರ್ಯರು ಹೇಳಿಕೆಯನ್ನು ಕೊಟ್ಟರು-"ಮಾನ್ಯ ಅಧ್ಯಕ್ಷರೇ, ಸದನದಲ್ಲಿ ನನ್ನ ತಲೆ ಬೋಳಿಸಲಾಗಿದೆಯೆ ಎಂಬ ಪ್ರಶ್ನೆಯನ್ನು ಎತ್ತಲಾಗಿದೆ. ಇದು ಬಹಳ ಜಟಿಲವಾದ ಪ್ರಶ್ನೆ. ಈ ವಿಚಾರದಲ್ಲಿ ಸರಕಾರವು ಗಡಿಬಿಡಿಯಿಂದ ಯಾವುದೇ ನಿರ್ಣಯಕ್ಕೆ ಬರುವುದಿಲ್ಲ. ನನ್ನ ಮುಂಡನವಾಗಿದೆಯೇ ಇಲ್ಲವೆ ಎಂಬುದನ್ನು ನಾನು ಹೇಳಲಾರೆ. ತಪಾಸಣೆ ಪೂರ್ತಿಯಾಗುವತನಕ ಈ ಸಂಬಂಧ ಸರಕಾರವು ಏನನ್ನೂ ಹೇಳುವುದಿಲ್ಲ. ನಮ್ಮ ಸರಕಾರವು ಮೂರು ಸದಸ್ಯರ ಒಂದು ಆಯೋಗವನ್ನು ರಚಿಸುವುದು. ಆ ಆಯೋಗದ ರಿಪೋರ್ಟನ್ನು ಸದನದಲ್ಲಿ ಮಂಡಿಸಲಾಗುವುದು."

ಸದಸ್ಯರೆಂದರು-"ಈ ಸಮಸ್ಯೆ ಕುತುಬ್ ಮಿನಾರ್‌ನಂತಲ್ಲ. ಅದಾದರೆ ಶತಮಾನಗಳ ಕಾಲ ತಪಾಸಣೆಗಾಗಿ ನಿಂತುಕೊಂಡೇ ಇದೆ. ಇದು ನಿಮ್ಮ ಕೂದಲುಗಳ ಪ್ರಶ್ನೆ. ಅವುಗಳು ಬೆಳೆಯುತ್ತವೆ. ಕತ್ತರಿಸಲ್ಪಡುತ್ತವೆ. ಇದರ ನಿರ್ಣಯ ಈ ಕೂಡಲೇ ಆಗಬೇಕು."

ಮಂತ್ರಿಯೆಂದ-"ಕುತುಬ್ ಮಿನಾರ್ ನೊಂದಿಗೆ ನನ್ನ ಕೂದಲುಗಳನ್ನು ಹೋಲಿಸಿ, ಅದನ್ನು ಅವಮಾನಿಸುವ ಅಧಿಕಾರ ಸದಸ್ಯರಿಗೆ ಇಲ್ಲ. ಎಲ್ಲಿಯವರೆಗೆ ಮೂಲ ಸಮಸ್ಯೆಯ ಪ್ರಶ್ನೆ ಇದೆಯೋ, ಅದರ ಕುರಿತು ವಿಚಾರಣೆಗೆ ಮೊದಲು ಸರಕಾರ ಏನನ್ನೂ ಹೇಳಲು ಬಯಸುವುದಿಲ್ಲ."

ವಿಚಾರಣಾ ಆಯೋಗ ವಿಚಾರಣೆ ನಡೆಸುತ್ತಲೇ ಇತ್ತು. ಇತ್ತ ಮಂತ್ರಿಯ ತಲೆಯ ಮೇಲೆ ಕೂದಲುಗಳು ಬೆಳೆಯುತ್ತಲೇ ಇದ್ದವು. ಕೊನೆಗೊಂದು ದಿನ ಮಂತ್ರಿಯು ವಿಚಾರಣಾ ಆಯೋಗದ ವರದಿಯನ್ನು ಸದನದ ಮುಂದಿರಿಸಿದ. ಆಯೋಗದ ನಿರ್ಣಯದ ಪ್ರಕಾರ ಮಂತ್ರಿಯ ಮುಂಡನ ಆಗಿರಲಿಲ್ಲ. ಅಧಿಕಾರದಲ್ಲಿದ್ದ ಪಕ್ಷದ ಸದಸ್ಯರು ಹರ್ಷ ಧ್ವನಿಯ ಮೂಲಕ ನಿರ್ಣಯವನ್ನು ಸ್ವಾಗತಿಸಿದರು. ಸದನದ ಇನ್ನೊಂದು ಕಡೆಯಿಂದ 'ಶೇಮ್, ಶೇಮ್' ಕೇಳಿಬಂತು, ವಿರೋಧ ಪಕ್ಷದ ಸದಸ್ಯರು ಸಿಟ್ಟುಗೊಂಡು ಹೇಳಿದರು- "ಇದು ಸಂಪೂರ್ಣ ಸುಳ್ಳು, ಮಂತ್ರಿಗಳ ತಲೆ ಬೋಳಿಸಲಾಗಿತ್ತು."

ಮಂತ್ರಿ ನಗುತ್ತಾ ಎದ್ದು ನಿಂತ. ಹೇಳಿದ - "ಇದು ನಿಮ್ಮ ದೃಷ್ಟಿಕೋನ. ಆದರೆ ಅದಕ್ಕೆ ಆಧಾರ ಬೇಕಲ್ಲಾ, ಇವತ್ತೂ ನೀವು ರುಜುವಾತು ಪಡಿಸಿದರೆ, ಆಧಾರ ಕೊಟ್ಟರೆ, ನಾನು ನಿಮ್ಮ ಆರೋಪವನ್ನು ಒಪ್ಪಿಕೊಳ್ಳುತ್ತೇನೆ."

ಹೀಗೆನ್ನುತ್ತಾ ಆತ ತನ್ನ ಗುಂಗುರು ಕೂದಲುಗಳ ಮೇಲೆ ಒಮ್ಮೆ ಕೈಯಾಡಿಸಿದ.

ಇತ್ತ ಸದನ ಇನ್ನೊಂದು ವಿಚಾರದ ಚರ್ಚೆಯಲ್ಲಿ ಮುಳುಗಿತು.

ಪಹಣಿ ಕೇಂದ್ರ ತೆರೆಯುವಂತೆ ಒತ್ತಾಯಿಸಿ ಧರಣಿ

ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲೂಕು ಕಛೇರಿಯಲ್ಲಿ ಪಹಣಿ ಪಡೆಯಲು ರೈತರು ದಿನಗಟ್ಟಲೆ ಸಾಲಿನಲ್ಲಿ ನಿಲ್ಲಬೇಕಾಗಿದೆ. ಆದ್ದರಿಂದ ರೈತರ ಅನುಕೂಲಕ್ಕಾಗಿ ತಾಲೂಕಿನ ನಾಡ ಕಛೇರಿಗಳಾದ ಹೆಚ್ಚೊಳ್ಳಿ ಮತ್ತು ಕರೂರುಗಳಲ್ಲಿ ಕಂಪ್ಯೂಟರ್ ಪಹಣಿ ಕೇಂದ್ರಗಳನ್ನು ಸ್ಥಾಪಿಸುವಂತೆ ಒತ್ತಾಯಿಸಿ ಕರ್ನಾಕಟ ಪ್ರಾಂತ ರೈತರ ತಾಲೂಕು ಸಮಿತಿ ಕಾರ್ಯಕರ್ತರು ಜುಲೈ 19 ರಂದು ಧರಣಿ ನಡೆಸಿದರು.

ಈ ಬಗ್ಗೆ ತಹಸಿಲ್ದಾರರ ಮೂಲಕ ಮುಖ್ಯ ಮಂತ್ರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಬಡ ರೈತರ ಸಾಲ ಮನ್ನ ಮಾಡಿ ಅವರಿಗೆ ಸಾಕುವ ಎತ್ತು, ಎಮ್ಮೆ ಹಸು, ಕೋಳಿ, ಕುರಿ, ಮೇಕೆ, ಇತ್ಯಾದಿ ಪಶುಗಳಿಗೆ ಉಚಿತ ಔಷಧಿ ಒದಗಿಸಿ ರೈತರ ರಕ್ಷಣೆಗೆ ಸರ್ಕಾರ ಮುಂದಾಗಬೇಕೆಂದು ಆಗ್ರಹಿಸಿದ್ದಾರೆ.

ಧರಣಿಯಲ್ಲಿ ಬಿ.ಲಿಂಗಪ್ಪ, ವಿ.ಗುರುಸ್ವಾಮಿ, ಕೆ.ನುಡುಗೋಡು, ಬಿ.ಅಡಿವೆಪ್ಪ, ವಿ.ಮಾರುತಿ, ಎಸ್.ಷಣ್ಮುಖಪ್ಪ, ಕೆ.ಪಂಪಾಪತಿ, ದರಗಪ್ಪ, ಕೆ.ಎಂ. ಮರಿ ಈರಪ್ಪ, ಕೆ.ತಿಪ್ಪ, ಚಂದ್ರಪ್ಪ ಮತ್ತು ಸಿಯಲ್ಲಪ್ಪ ಮುಂತಾದವರು ಭಾಗವಹಿಸಿದ್ದರು.





ರಂಗಭೂಮಿಯನ್ನು ಶಿಕ್ಷಣದ ಅಂಗವಾಗಿ ಬಳಸಿಕೊಳ್ಳಬೇಕಾದ ಅಗತ್ಯದ ಬಗ್ಗೆ ಬಹಳ ಬಾರಿ ಮಾತನಾಡಲಾಗುತ್ತಿದೆ. ನಮ್ಮಲ್ಲಿ ಹೆಚ್ಚಿನವರಿಗೆ ಶಿಕ್ಷಣ ಎಂದರೆ ಶಾಲೆಯಲ್ಲಿ ನಡೆಯುವ ಪಾಠ ಪ್ರವಚನಗಳು ಎಂದರೆ ಓದುವ ಬರೆಯುವ ಲೆಕ್ಕಾಚಾರ ಮಾಡುವ ಕುಶಲತೆಯನ್ನು ಪಡೆಯುವುದು ಎನ್ನುವ ಅರ್ಥದಲ್ಲಾದರೆ ಇನ್ನೂ ಕೆಲವರಿಗೆ ಶಿಕ್ಷಣವೆಂದರೆ ಪಾಂಡಿತ್ಯ ಎಂದರೆ ಲೋಕಜ್ಞಾನ ಅರ್ಥಾತ್ ಮಾಹಿತಿ ಸಂಗ್ರಹ. ಇನ್ನುಳಿದವರಿಗೆ ಶಿಕ್ಷಣವೆಂದರೆ ಬದುಕಿನ ದಾರಿ. ಕುಶಲ ಕೈಗಾರಿಕೆ, ಉತ್ತಮ ನೌಕರಿ, ಕೈತುಂಬ ಸಂಪಾದನೆ ಐಷಾರಾಮದ ಜೀವನ ಎಂದರ್ಥ. ಇನ್ನೂ ವಿಸ್ತರಿಸಿ ಹೇಳಬೇಕಾದರೆ ಶಿಕ್ಷಣವುಬಂಡವಾಳ ಹೂಡಿಕೆಯ ಒಂದು ಕ್ರಮ. ಶಿಕ್ಷಣ ಸಂಸ್ಥೆಗಳನ್ನು ತೆರೆಯುವವರು ಕೂಡ ಊಇದೇ ಉದ್ದೇಶ ಉಳ್ಳವರಾಗಿದ್ದಾರೆ.

ಹೆಚ್ಚಿನವರಿಗೆ ಬದುಕು ಒಂದೇ ಪರಮ ಗುರಿಯಾಗುತ್ತದೆ. ಆದರೆ ಅದರಿಂದಾಚೆ 'ಬಾಳುವೆ' ಎಂಬುದಿದೆ ಎನ್ನುವುದನ್ನು ಮರೆತೇಬಿಡುತ್ತಾರೆ. 'ಬಾಳುವೆ' ಬದುಕಿಗಿಂತ ಗುರಿಯನ್ನು, ಅರ್ಥವನ್ನು ಕಾಣಲು ಪ್ರಯತ್ನಿಸಿದರೆ ಆತ ಬದುಕಿ ಬಾಳಿದನು ಎಂದು ಹೇಳಬಹುದು. ಬದುಕನ್ನು ಬಾಳುವೆಯಗಿ ಮಾಪರ್ಟಡಿಸುವ ಸಾಧನವೇ ನಿಜವಾದ ಶಿಕ್ಷಣ. ಶಿಕ್ಷಣ ಎನ್ನುವುದು ನಿರಂತರವಾಗಿ ನಡೆಯುವ ವ್ಯಕ್ತಿ ವಿಕಸನ ಪ್ರಕ್ರಿಯೆ. ಈ ಹಿನ್ನೆಲೆಯಲ್ಲಿ ರಂಗಭೂಮಿಯನ್ನು ಬಳಸಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ.

ಈ ಹಿನ್ನೆಲೆಯಲ್ಲಿ ಈಗಾಗಲೇ ಮಕ್ಕಳ ರಂಗಭೂಮಿಗೆ ಹಲವು ನಾಟಕಗಳನ್ನು ನೀಡಿರುವ ಡಾ. ಆರ್.ವಿ. ಭಂಡಾರಿಯವರ ಎರಡು ನಾಟಕಗಳನ್ನು ಗಮನಿಸಬೇಕು. ಮೊದಲನೆಯದು ಬಾಲಕ ಅಂಬೇಡ್ಕರ್ ಕುರಿತಾದ 'ಬೆಳಕು ಹಂಚಿದ ಬಾಲಕ'. ಇನ್ನೊಂದು ಗಾಂಧಿ ಕುರಿತಾದ 'ಬೆಳಕು ಹಂಚಿದ ಬಾಲಕ'. ಇನ್ನೊಂದು ಗಾಂಧಿ ಕುರಿತಾದ 'ನಾನು ಗಾಂಧಿ ಆಗ್ತೇನೆ'.

ಹಾಗೆ ನೋಡಿದರೆ ಅಂಬೇಡ್ಕರ್ ಮತ್ತು ಗಾಂಧಿ ಬಗ್ಗೆ ಪ್ರಾಥಮಿಕ ಶಾಲಾ ಪಠ್ಯಗಳಲ್ಲಿ ಹಲವು ಬಾರಿ ಹಲವು ಭಾಷೆಗಳಲ್ಲಿ ಹೇಳಲಾಗಿದೆ. ಬಹಳ ಬಾರಿ ಕೇಳಿ ಬರುವ ಮಾತೆಂದರೆ ಇದನ್ನು ಪಾಠ ಮಾಡಿ ಮಾಡಿ ಸಾಕಾಗಿದೆ. 'ಇದನ್ನು ಕೇಳಿ ಕೇಳಿ ಸಾಕಾಗಿದೆ'. ಹಾಗಿದ್ದರೂ ನಿಜವಾದ ಅರ್ಥದಲ್ಲಿ ಅಂಬೇಡ್ಕರ್ ಮತ್ತು ಗಾಂಧಿಯನ್ನು ಅರ್ಥೈಸಿಕೊಳ್ಳುವ ಪ್ರಯತ್ನದಲ್ಲಿ ಹೆಚ್ಚಿನ ಶಿಕ್ಷಕರು ಅಥವಾ ವಿದ್ಯಾರ್ಥಿಗಳು ಸೋತು ಹೋಗಿದ್ದಾರೆ.

ಡಾ.ಆರ್.ವಿ.ಭಂಡಾರಿಯವರ ಎರಡೂ ನಾಟಕಗಳು ಗೆಲ್ಲುವುದು ಪಠ್ಯದಲ್ಲಿ ಬಂದಿರುವ ವಸ್ತುವನ್ನು ಆಕರ್ಷಕ ರೀತಿಯಲ್ಲಿ ನಾಟಕವಾಗಿ ಕಟ್ಟಿಕೊಟ್ಟಿರುವ ರೀತಿಯಲ್ಲಿ, ಮಕ್ಕಳ ಭಾಷಾ ಕಲಿಕೆಗೆ ಪೂರಕವದ ಸಂಭಾಷಣೆಗಳಲ್ಲಿ, ನಾಟಕದೊಳಗೆ ನಾಟಕವಾಡುವ ಸನ್ನಿವೇಶದಲ್ಲಿ, ಆಟ ಆಡುತ್ತಾ ವಿಷಯದ ಗಂಭೀರ ಸಂದರ್ಭಗಳನ್ನು ಅರ್ಥ ಮಾಡಿಕೊಳ್ಳುವ ಬಗೆಯಲ್ಲಿ.

ಮಕ್ಕಳ ನಾಟಕಗಳಲ್ಲಿ ಹುದುಗಿರುವ ಅಪಾರ ಶಕ್ತಿಯನ್ನು ಬಳಕೆ ಮಾಡಿಕೊಳ್ಳುವಲ್ಲಿ ಈ ಎರಡೂ ನಾಟಕಗಳ ಅಭ್ಯಾಸ, ಪ್ರಯೋಗ ಪ್ರದರ್ಶನಗಳು ಕಾರಣವಾಗಬೇಕು. ನಾಟಕಗಳೆಂದರೆ ಕೇವಲ ಮನೋರಂಜನೆಯ ಸರಕುಗಳಲ್ಲ. ಸಮಾಜಮುಖೀ ಚಿಂತನೆಯ ಚಟುವಟಿಕೆಗಳ ಸ್ಪಷ್ಟ ಸ್ವರೂಪ ಎಂಬ ಅರಿವಾಗಬೇಕು.

ಬದುಕನ್ನು ಬಾಳುವೆಯನ್ನಾಗಿ ರೂಪಿಸಿದ ಎರಡು ಮಹಾನ್ ವ್ಯಕ್ತಿತ್ವಗಳ ಪಾತ್ರ ಪರಿಚಯ ಈ ನಾಟಕಗಳ ಮೂಲಕ ಕನ್ನಡ ನಾಡಿನ ಮಕ್ಕಳಿಗೆ ಒದಗಿಬಂದಿದೆ. ಆಕಾರಣಕ್ಕಾಗಿ ಆರ್.ವಿ.ಭಂಡಾರಿಯವರು ಅಭಿನಂದನೆಗೆ ಅರ್ಹರಾಗಿದ್ದಾರೆ.

- ಐ.ಕೆ. ಬೋಳುವಾರು

ಬೆಳಕುಹಂಚಿದ ಬಾಲಕ
ನಾನು ಗಾಂಧಿ ಆಗ್ತೇನೆ
ಲೇ: ಡಾ. ಆರ್.ವಿ.ಭಂಡಾರಿ
ಪುಟ - 50
ಬೆಲೆ ರೂ. 25
ಪ್ರಕಾಶನ
ಬಂಡಾಯ ಪ್ರಕಾಶನ
ಅಂಚೆ-ಅರೆ ಅಂಗಡಿ, ಹೊನ್ನಾವರ,
ಉತ್ತರಕನ್ನಡ 581430

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH